# ಕೊಡಗು ಸಂಗಾತಿ

ಸಂಪಾದಕಿ : ಪಟ್ಟೆಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 3 ಸಂಚಿಕೆ : 4 ಫೆಬ್ರವರಿ 15 ರಿಂದ 28, 1999 ಪುಟಗಳು : 24 ರೂ 5.



[ಲೇಖನ ಒಳಪುಟಗಳಲ್ಲಿ]

ದಿ|| ನಿಡ್ಯಮಲೆ ರಾಮಪ್ಪ ಸೋಮಣ್ಣ BABL, ಪ್ರಥಮ ಲೋಕಸಭಾ ಸದಸ್ಯ
1952 ರಿಂದ 1956 ಕೂರ್ಗ್ ಅಸೆಂಬ್ಲಿಯಲ್ಲಿ ಅರೆಭಾಷಿಕರ ಮೊದಲ ಪಾರ್ಲಿಮೆಂಟೇರಿಯನ್

ಯಾವುದೇ ರೀತಿಯ ಕಷ್ಟ ಕಾರ್ಪಣ್ಯಗಳಿಗೆ ಬಗ್ಗದೆ, ಟೀಕೆ ಟಿಪ್ಪಣಿಗಳಿಗೆ ಅಂಜದೆ ಜನಾಂಗವನ್ನು ಸಂಘಟಿಸುವ ನಿಟ್ಟಿನಲ್ಲಿ ಪ್ರಯತ್ನಿಸಿ ಯಶಸ್ಸು ಗಳಿಸುತ್ತಿರುವ ಮತ್ತು 3ನೇ ವರ್ಷಕ್ಕೆ ಪಾದಾರ್ಪಣೆಗೈದ ನಮ್ಮೆಲ್ಲರ ನೆಚ್ಚಿನ "ಕೊಡಗು ಸಂಗಾತಿ"ಗೆ ಕಲ್ಲುಮುಟ್ಲು ಮನೆತನದವರಿಂದ ಶುಭ ಕಾಮನೆಗ

**ಕಲ್ಲುಮುಟ್ಲು ಪೂವಯ್ಯ ಬೋಪಯ್ಯ, ಕಲ್ಲುಮುಟ್ಲು ವಿಮಲ ಬೋಪಯ್ಯ ಮತ್ತೆ ಮಜ ಚರಣ್**

# ಚರಣ್ ಬೊಟಿಕ್ ಲೇಡಿಸ್ ಟೈಲರ್ಸ್

ಚೂಡಿದಾರ್, ನೈಟಿ, ಮಿಡ್ಡಿ, ಫ್ರಾಕ್, ಬ್ಲೌಸ್ ಇವ್ಕೆ
ಒನ್ನೊ ಭೇಟಿ ಕೊಡಿ. ಬ್ಯಾಗ ಹೊಲ್ದ್ ಕೊಟ್ಟವೆ.
ನಮ್ಮವುಕ್ಕೆ ವಿಶೇಷ ರಿಯಾಯಿತಿ ಸಹ ಉಟ್ಟು.

ಅಂಗಡಿ : ನಂ. 1515, 11ನೇ ಕ್ರಾಸ್, ಎಂ. ಕೆ. ಕೆ. ರೋಡ್, ಮರಿಯಪ್ಪನ ಪಾಳ್ಯ, ಬೆಂಗಳೂರು–21
ಮನೆ : ನಂ. 189/ಬಿ, 2ನೇ ಮುಖ್ಯರಸ್ತೆ, 5ನೇ ಕ್ರಾಸ್, ಪ್ರಕಾಶ್ ನಗರ್, ಬೆಂಗಳೂರು–21.


---

ಮುಂದಿನ ಸಂಚಿಕೆಯಲ್ಲಿ ಜನಪ್ರಿಯ ಕಾದಂಬರಿಕಾರ "ಕೌಂಡಿನ್ಯ" ರಚಿಸಿರುವ

# "ಸರ್ಪಗಂಧ"

ಎಂಬ ವಿಭಿನ್ನ ರೀತಿಯ ಕಾದಂಬರಿ ಮೂಡಿ ಬರಲಿದೆ.



—ನಿಮ್ಮ ಪತ್ರಿಕೆಯನ್ನು ಇಂದೇ ಕಾದಿರಿಸಿ—

ಪದರಗಳ ಹಿಂದೆ ಅಡಕವಾಗಿರುವ ಸತ್ಯ......!

ಹುತ್ತದಲ್ಲಿರುವ ವಿಷ ಸರ್ಪ !

ನಿಗೂಢತೆಯ ಮಹಾ ಸಂಗಮ !

ತರ್ಕಬದ್ಧವಾದ ಆಲೋಚನೆಗಳು !

ಪ್ರತಿ ಅಧ್ಯಾಯದಲ್ಲೂ ರಹಸ್ಯದೊಂದಿಗೆ ರೋಚಕತೆಯನ್ನು ಅನಾವರಣಗೊಳಿಸುತ್ತಾ ಸಾಗುವ ಕುತೂಹಲಕಾರಿ ಕಾದಂಬರಿ !


ಲೇಖಕರ ವಿಳಾಸ : ವೈ. ಎಸ್. ನಾಗೇಶ್ [ಕೌಂಡಿನ್ಯ]
C/o ಶ್ರೀ ರಾಮಸ್ವಾಮಿ ಭಟ್, ಅರ್ಚಕರ ಕೋಟೆ,
ಹೊಳೆನರಸೀಪುರ–573 211, ಹಾಸನ ಜಿಲ್ಲೆ.

# ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
**ಪಟ್ಟಡ ಪಿ. ಶೀಲಾಮಣಿ**
ಗೌರವ ಸಂಪಾದಕ :
**ಪಟ್ಟಡ ಎಂ. ಪ್ರಭಾಕರ**
ಮುದ್ರಕರು :
**ಮಣ್ಣುಂಡ್ರ ಕೆ. ತಮ್ಮಯ್ಯ**

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :
**ಕೊಡಗು ಸಂಗಾತಿ**
ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮೀಪುರಂ, ಮೈಸೂರು–12.
ಫೋನ್ : 0821/516771

**–ಸಂಪರ್ಕಿಸುವ ವಿಳಾಸ–**

**ಮಣಿ ನಂಗಾರ್**
C/o ನಂಗಾರ್ ಆಡಿಯೋ & ವೀಡಿಯೋ
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ–571 201
ದೂರವಾಣಿ : 08272/29372

**ಬೈತಡ್ಕ ಜಾನಕಿ ಬೆಳ್ಯಪ್ಪ**
ನಂ. 16, ಎಲ್.ಐ.ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

**ಕುಂಭಗೌಡನ ಸೋಮಣ್ಣ**
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ–571234

**ಅಮ್ಮಾಚೀರ ಪೊನ್ನಪ್ಪ ಅಥವಾ**
**ಕಲ್ಲುಮುಟ್ಲು ಬಸಪ್ಪ**
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು-04
ದೂರವಾಣಿ–080/6549669


## ಒಳನೋಟ


ಪುಟಗಳು

- ಸಂಪಾದಕೀಯ 2
- ದಿ|| ನಿಡ್ಯಮಲೆ ಸೋಮಣ್ಣನವರು. 3
- ಗೌಡರ ವಿವಾಹ ಪದ್ಧತಿಗಳ ಅವಲೋಕನ 4
- ಸುಳ್ಯದ ಅಮರಕ್ರಾಂತಿ : ಸ್ವಾತಂತ್ರ್ಯದ ಪ್ರಥಮ ಮಹಾಯೋಧರು 5
- ಆರೋಗ್ಯ ಚಿಂತನ : ಹೆಚ್ಚು ರಕ್ತದೊತ್ತಡ 6
- ಸಮಾರಂಭಗಳು–ಒಂದು ಅನಿಸಿಕೆ 8
- ಕವನ 10
- ಗೌಡರ ಪದ್ಧತಿಗಳು 11
- ಕೊಡಗು ಗೌಡ ಸಮಾಜದ ಮಹಾಸಭೆ ಮತ್ತು ಅಭಿನಂದನಾ ಸಮಾರಂಭ 12
- ನಿಮ್ಮ ಪತ್ರಗಳು 14


## ಅರೆ ಭಾಷಿಕ ವಿಭಾಗ


- ಬಯಸದೇ ಬಂದ ಭಾಗ್ಯ ಉಳ್ಸೋಕು, ಬೆಳ್ಸೋಕು, ನಮ್ಮೆಲ್ಲರ ಆದ್ಯ ಕರ್ತವ್ಯ 15
- ಕರಿಚಿನ್ನ ಧಾರಾವಾಹಿ–21 17
- ಕಾಮುಣಿ ಗೂಡೆದ್ ಕಂಬುಳಿ ಹರ್‍ದ್ಪೋತ್ ಗಡ ! 19



**ಚಂದಾ ವಿವರ**

| | | |
|---|---|---|
| ಬಿಡಿ ಪ್ರತಿ | : | 5 ರೂ. |
| ಅರ್ಧ ವಾರ್ಷಿಕ | : | 60 ರೂ. |
| ವಾರ್ಷಿಕ ಚಂದಾ | : | 120 ರೂ. |

# ಸಂಪಾದಕೀಯ :

## ಸೇನೆಗಳಿಗೆ ನಮ್ಮ ಯುವಕರ ಸೇರ್ಪಡೆ ಕುಂಠಿತವಾಗಿದೆಯೇ ?

ಕರ್ನಾಟಕದಲ್ಲಿ ಭೂ ಸೈನ್ಯ, ನೌಕದಳ, ವಿಮಾನದಳ, ಪ್ಯಾರ ಮಿಲಿಟರಿಯಲ್ಲಿ ಕೊಡಗಿನ ಯುವಕರು ಇತರ ಜಿಲ್ಲೆಗಿಂತ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಇಲ್ಲಿ ಸೇವೆ ಸಲ್ಲಿಸಿದ ಯುವಕರು ದೇಶ ಸೇವೆ ಮಾಡಿ ಜಿಲ್ಲೆಗೆ ಉತ್ತಮ ಹೆಸರು ತಂದಿದ್ದಾರೆ. ನಮ್ಮ ಕೊಡಗಿನ ಯುವಕರು ಸೈನ್ಯಕ್ಕೆ ಸೇರಿದುದರಿಂದ ಅವರ ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಕ್ಕಲ್ಲದೆ ತನ್ನ ಸಹೋದರ, ಸಹೋದರಿಯರ ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ, ವಿದ್ಯಾರ್ಥಿ ವೇತನ ದೊರಕುವ ಸಂದರ್ಭದಿಂದ ಸೈನ್ಯಕ್ಕೆ ಸೇರಿದವರ ಕುಟುಂಬದ ಸದಸ್ಯರುಗಳ ವಿದ್ಯಾಭ್ಯಾಸಕ್ಕೂ ಮತ್ತು ಅವರ ಮಕ್ಕಳಿಗೆ ಯಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲು ಸ್ಥಾನಗಳನ್ನು ಕೊಟ್ಟು ಅವರುಗಳ ಮಕ್ಕಳಿಗೂ ಸಹ ಬೇಕಾದ ವಿದ್ಯಾಭ್ಯಾಸದ ಅನುಕೂಲತೆಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ಕೊಡಗಿನಲ್ಲಿ ಸಣ್ಣ ಹಿಡುವಳಿದಾರ ಹೆಚ್ಚಾದುದರಿಂದಲೇ ಸೈನಿಕರು ತಮ್ಮ ಪಿತ್ರಾರ್ಜಿತ ಆಸ್ತಿಗಳನ್ನು, ತಾವು ದುಡಿದ ಹಣದಿಂದ ಅದೆಷ್ಟೋ ರೀತಿಯಲ್ಲಿ ಅಭಿವೃದ್ಧಿ ಪಡಿಸುವುದಕ್ಕೆ ಕಾರಣಕರ್ತರಾಗಿದ್ದಾರೆ. ಆದರೆ ಈಗ ಕೆಲವು ವರ್ಷಗಳಿಂದ ನಮ್ಮ ಯುವಕರು ಸೈನ್ಯಕ್ಕೆ ಸೇರುವುದು ಬಹಳ ಕಡಿಮೆಯಾಗಿದೆ ಅಲ್ಲದೆ ಯುವಕರು ಸೈನ್ಯಕ್ಕೆ ಸೇರುವ ಬಯಕೆ ವ್ಯಕ್ತಪಡಿಸಿದರು ಸಹ ಸೈನ್ಯ ಸೇರುವ ಇರಾದೆ ಇದ್ದರೂ ಅವರ ದೇಹದಾರ್ಢ್ಯತೆ ಸರಿ ಇಲ್ಲದೆ ಸೈನ್ಯದಲ್ಲಿ ಸೇರ್ಪಡೆಯಾಗುವ ಸಂದರ್ಭ ಬಹಳ ಕಡಿಮೆಯಾಗಿದೆ.

ಇದಕ್ಕೆ ಕಾರಣವೇನೆಂಬುದನ್ನು ಹಿರಿಯರು ಯೋಚಿಸುವ ಕಾಲ ಬಂದಿದೆ. ಯುವಕರಲ್ಲಿ ಕುಡಿತದ ಚಟ ಹೆಚ್ಚಾದುದರಿಂದಲೋ ಅಥವಾ ನಮ್ಮಲ್ಲಿನ ಆರ್ಥಿಕ ಸ್ಥಿತಿ ಸುಧಾರಿಸಿರುವುದರಿಂದಲೋ ಅಥವಾ ಅರ್ಹತೆಮಟ್ಟ ತಲುಪದೆ ಇರುವುದರಿಂದಲೋ ಯುವಕರು ಸೈನ್ಯದ ಸೇವೆಗೆ ಸೇರುವ ಸಂಖ್ಯೆ ಕಡಿಮೆಯಾಗಿದೆಯೇ ? ಎಂಬುದನ್ನು ಸಂಗಾತಿ ಜನತೆಯೊಡನೆ ಕೇಳುತ್ತಿದೆ.

## ಗಡಿನಾಡಿನ ಕನ್ನಡಿಗರಿಗೆ ಕರೆ

ಪೋಗದಿರಿ ಪೋಗದಿರಿ ಕನ್ನಡದ ಜನರೇ
ಧೀರರಾಗಿ ಮೆರೆಯಿರಿ ನಿತ್ಯ ಜೀವನದಿ ।
ನೆರೆಯುವರ ಧಾಳಿಗೆ ಏಕೆ ಭಯವು
ಕನ್ನಡದ ನೆಲವ ಮಾರದಿರಿ ನಿಲ್ಲಿ ॥ ೧ ॥

ಗಡಿನಾಡಲ್ಲಿ ಸಹ ಸಾಧಿಸಿರಿ ಜೀವನವ
ಬೆಳಗಿ ಬರಲಿ ನಿಮ್ಮ ಕನ್ನಡ ಧ್ವನಿಯು ॥
ನೋಡಿರಿ ತಮಿಳರ ಸಂಘ ಶಕ್ತಿ
ಎಲ್ಲೆಡೆಯು ಕೇಳುತಿದೆ ಅದರ ಉಕ್ತಿ ॥ ೨ ॥

ಧೀರರಾಗಿರಿ ನೀವು ಆಂಗ್ಲರಂತೆ
ಗಡಿನಾಡಲ್ಲಿದ್ದರೂ ಕೆಚ್ಚೆದೆಯಿರಲಿ ।
ಕನ್ನಡ ಭಾಷೆಯುನ್ನು ಕಾಪಾಡಿ ನೀವು
ಧನ್ಯರಾಗಿರಿ ಅಲ್ಲೆ ನೈಜ ಸಾಹಸದಿ ॥ ೩ ॥

ಪುನರ್ಜನ್ಮದಲಿ ಹುಟ್ಟಿ ಕನ್ನಡ ನೆಲದಿ
ಆಗ ಕನ್ನಡ ನೆಲವು ಒಟ್ಟು ಸೇರುವುವು ।
ಕನ್ನಡ ಕೇಂದ್ರದಿ ಜನಿಸಿ ಆಗ
ಧನ್ಯತೆಯ ಪಡೆವಿರಿ ಇದು ಸತ್ಯವು.

—ಮುಂಡೆಕೋಲು ಗಂಗಾಧರಗೌಡ, ಸುಳ್ಯ.

## ಇದೆಂಥ ವಿಚಿತ್ರ—ಆದರೂ ಸತ್ಯ

❀ ಮನುಷ್ಯ ತಾನು ತಪ್ಪು ಮಾಡಿದಾಗ ಅದನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಅದೇ ತಪ್ಪನ್ನು ಬೇರೆಯವರು ಮಾಡಿದರೆ ಹಿಯ್ಯಾಳಿಸುತ್ತಾನೆ.

❀ ಯಾರಾದರೂ ನಿಧನರಾದರೆ ದುಃಖವನ್ನು ತೋಡಿಕೊಳ್ಳುವವನು, ಹಾಗೆಯೇ ದಿವಂಗತನ ಹೆಸರಿನಲ್ಲಿ ಸಿಹಿ ಹಂಚುವುದನ್ನು ಮಾಡುತ್ತಾನೆ.

* ಪ್ರತಿಯೊಬ್ಬನು ತಾನು ಎಲ್ಲರ ಮೋಸವನ್ನು ತಿಳಿದಿರುವೆನೆಂದು ಹೇಳುವನು. ಆದರೆ ತನ್ನ ಮೋಸ ಯಾರಿಗೂ ತಿಳಿಯಬಾರದೆಂದು ಬಯಸುವನು.

❀ ಜೀವಿಸಿರುವವರಿಂದ ಸೇವೆ ಮಾಡಿಸಿಕೊಳ್ಳುತ್ತಾನೆ ಆದರೆ ಸತ್ತವರನ್ನು ಪೂಜಿಸುವನು.

—ಮುಕ್ಕಾಟಿ ಮಮತಾ ಪೂಣಚ್ಚ, ಹೊಸ್ಕೇರಿ

# ದಿ|| ನಿಡ್ಯಮಲೆ ಸೋಮಣ್ಣನವರು

1905ರ ಎಪ್ರಿಲ್ 15 ರಂದು ಕೊಡಗಿನ ಪೆರಾಜೆ ಗ್ರಾಮದ ದಿ|| ನಿಡ್ಯಮಲೆ ರಾಮಪ್ಪ ಮತ್ತು ತಂಗಮ್ಮ ದಂಪತಿಗಳ ಮಗನಾಗಿ ಜನ್ಮ ತಾಳಿದ ಇವರ ಪ್ರೌಢ ವಿದ್ಯಾಭ್ಯಾಸ ಮಡಿಕೇರಿಯ ಸೆಂಟ್ರಲ್ ಶಾಲೆಯಲ್ಲಿ ನಡೆಯಿತು. ಪದವಿ ಮಂಗಳೂರಿನ ಸೈಂಟ್ ಅಲೋಸಿಯಸ್‌ನಲ್ಲಿ ಮತ್ತು 1930 ರಲ್ಲಿ ಮದರಾಸು ವಿಶ್ವವಿದ್ಯಾನಿಲಯದಲ್ಲಿ 'ಲಾ' ಪದವಿಯನ್ನು ಗಳಿಸಿದರು.

ವಿದ್ಯಾಭ್ಯಾಸ ಮುಗಿದೊಡನೆ ಕಾಂಗ್ರೆಸ್ ಪಾರ್ಟಿಗೆ ಸೇರಿ, ಒಂದು ಸಾರಿ ಕೊಡಗು ಜಿಲ್ಲಾ ಕಾಂಗ್ರೆಸ್ಸಿನ ಸಮಿತಿಯ ಉಪಾಧ್ಯಕ್ಷರಾಗಿದ್ದರು. ಸೈಮನ್ ಕಮಿಷನ್ನಿನ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಿದ ಚಳುವಳಿಯಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದಾರೆ. ತದನಂತರ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯ ಭಾಗವಹಿಸಿದ್ದಾರೆ. 1942ರ 'ಭಾರತ ಬಿಟ್ಟು ತೊಲಗಿರಿ' ಸತ್ಯಾಗ್ರಹದಲ್ಲಿ ಭಾಗವಹಿಸಿ ಅವರನ್ನು ಜೈಲಿಗೆ ಬಂದಿಸುವುದರಿಂದ ತಪ್ಪಿಸಿಕೊಂಡು ಗುಪ್ತವಾಗಿ ಕೆಲಸ ಮಾಡಿ ಸೇವೆಯನ್ನು ಸಲ್ಲಿಸಿದ್ದಾರೆ.

ಶ್ರೀಯುತ ಸೋಮಣ್ಣನವರು 1945ರಲ್ಲಿ ಕೊಡಗಿನ ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರಾಗಿ ಕೌನ್ಸಿಲಿನ ಸಕ್ರಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ರಾಜ್ಯದ ಆರ್ಥಿಕ ಭದ್ರತೆ, ರಾಜ್ಯದ ಯೋಜನೆಗಳನ್ನು ರೂಪಿಸುವುದರಲ್ಲೂ ಹರಿಜನರ ಸ್ಥಿತಿಯನ್ನು ಉದ್ಧರಿಸುವುದರಲ್ಲಿಯೂ, ಕೌನ್ಸಿಲಿನಲ್ಲಿ ನಡೆದ ಚರ್ಚೆಗಳಲ್ಲಿ ತುಂಬಾ ಶ್ರದ್ಧೆವಹಿಸುತ್ತಿದ್ದರು. ಅವರು ರಾಜ್ಯದ ಪಂಚವಾರ್ಷಿಕ ಯೋಜನೆಯ ಮಂಡಳಿಯಲ್ಲೂ, ಹರಿಜನರ ಉದ್ಧಾರ ಕೆಲಸಕಾರ್ಯಗಳ ಮಂಡಳಿಯ ಸದಸ್ಯರಾಗಿಯೂ, ಲೆಜಿಸ್ಲೇಟಿವ್ ಕೌನ್ಸಿಲಿನ ಹಣಕಾಸಿನ ಸಮಿತಿಯಲ್ಲೂ ಸಾಕಷ್ಟು ದುಡಿದಿದ್ದಾರೆ.

ಗಾಂಧೀಜಿಯವರ ಭಕ್ತರೂ, ಶಿಷ್ಯರೂ ಆದ ಇವರು ಸಮಾಜದಲ್ಲಿದ್ದ ದುಷ್ಟ ಸ್ಥಿತಿಗಳಾದ ಅಸ್ಪೃಶ್ಯತೆ ಮುಂತಾದವುಗಳನ್ನು ಹೋಗಲಾಡಿಸಲು ಹರಿಜನರ ಉದ್ಧಾರ ಕಾರ್ಯದಲ್ಲೂ, ಖಾದಿಯನ್ನು ಪ್ರಚಾರ ಮಾಡುವ ವಿಷಯದಲ್ಲಿ ತುಂಬಾ ದುಡಿದಿದ್ದಾರೆ. ಕೃಷಿಗಳನ್ನು ನಾಶ ಮಾಡುವ ಕೀಟಗಳ ನಿರ್ಮೂಲನಕ್ಕಾಗಿ ಲಂತಾನ ಕಮಿಟಿಯಲ್ಲೂ ತುಂಬಾ ಕೆಲಸ ಮಾಡಿದ್ದಾರೆ. ಅವರಿಗೆ ಬಹುಶಃ ಸಾಮಾಜಿಕ ಹಾಗೂ ವಿದ್ಯಾಭ್ಯಾಸದ ಸುಧಾರಣೆಯಲ್ಲೂ ಆಸಕ್ತಿ ಇದ್ದುದರಿಂದಲೇನೋ ಅವರನ್ನು ಕೊಡಗಿನಿಂದ ಮುಂಬೈ ಸರ್ಕಾರದವರು ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇದರ ಸಮಿತಿಯ ಒಬ್ಬ ಸದಸ್ಯರಾಗಿ ನೇಮಿಸಿದ್ದರು.

1949 ರಲ್ಲಿ ಸರ್ದಾರ್ ವಲ್ಲಬಾಯಿ ಪಟೇಲರು ಕೊಡಗಿನ ಭವಿಷ್ಯದ ವಿಷಯ ಚರ್ಚಿಸಲು ಇವರಿಗೆ ದೆಹಲಿಗೆ ಬರಲು ಆಹ್ವಾನವಿತ್ತಿದ್ದರು.

1952ರಲ್ಲಿ ಪ್ರಪ್ರಥಮ ಭಾರತದ ಪ್ರಜಾಪ್ರಭುತ್ವದ ಲೋಕಸಭೆಯ ಸದಸ್ಯರಾಗಿ ಆಯ್ಕೆಯಾದರು.

ಕೊಡಗಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಅಲ್ಲದೆ ಇವರು ದೇಶದ ರಕ್ಷಣೆಯ ವಿಷಯದಲ್ಲಿ ಹೆಚ್ಚಿಗೆ ಆಸಕ್ತಿ ತೋರಿಸಿ ಭಾರತದಲ್ಲಿ ದಕ್ಷತೆಯ ವಿಮಾನ ಬಲ ಮತ್ತು ನೌಕಾಬಲವನ್ನು ನಮ್ಮ ಉದ್ದವಾದ ಕರಾವಳಿಗಳನ್ನು ಕಾಪಾಡಲು ಭದ್ರಪಡಿಸಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಪಡಿಸುತ್ತಿದ್ದರು.

ದಿ|| ಸೋಮಣ್ಣನವರು ಕೊಡಗು ಒಂದು 'ಸಿ' ಪ್ರಾಂತ್ಯವಾಗಿರುವುದರಲ್ಲಿ ತೃಪ್ತಿಪಡದೆ ಅದು 'ಎ' ಪ್ರಾಂತ್ಯಗಳ ಸಮೂಹದಲ್ಲಿ ಸೇರಿಸಬೇಕೆಂಬ ಬಲವಾದ ಅಭಿಪ್ರಾಯವನ್ನು ಹೊಂದಿದ್ದರು.

ದಿ|| ಸೋಮಣ್ಣನವರು ಒಬ್ಬ ಸರಳ ಸ್ವಭಾವದ ನಿರ್ಮಲ ಮನಸ್ಸಿನ ವ್ಯಕ್ತಿ. ಒಳ್ಳೆಯ ವಾಗ್ಮಿ. ಇವರ ಜೀವನ ನಿಷ್ಕಪಟ ವ್ಯಕ್ತಿತ್ವದಿಂದ ಕೂಡಿತ್ತು. 1957ನೇ ಇಸವಿಯಲ್ಲಿ ಕರ್ನಾಟಕದ ಪಿರಿಯಾಪಟ್ಟಣ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದರು. ದಿ|| ಸೋಮಣ್ಣನವರು ಅಕಾಲಿಕ ವಿಧಿವಶಾತ್ ಹಠಾತ್ತನೆ ಪಕ್ಷವಾತ ರೋಗಕ್ಕೆ ತುತ್ತಾದರು. ರಾಜಕೀಯ ಜೀವನ ಕುಂಠಿತವಾಗಿ 1960ರಲ್ಲಿ ವೈಕುಂಠವಾಸಿಯಾದರು. ○

—ಸಂಗಾತಿ ವರದಿ.

ಕೊಡಗು ಸಂಗಾತಿ ಪತ್ರಿಕೆಗೆ
ಇಂದೇ ಚಂದದಾರರಾಗಿ

# ಗೌಡರ ವಿವಾಹ ಪದ್ಧತಿಗಳ ಅವಲೋಕನ

[ಮುಂದುವರೆದ ಭಾಗ]

ಗೌಡರ ವಿವಾಹ ಪದ್ಧತಿಗಳಲ್ಲಿ ಕಂಡುಬರುವ ಪದ್ಧತಿಗಳು ವೇದಗಳ ಕಾಲದ, ಕಾಳಿದಾಸನ ಕಾಲದ ಆಚಾರ ವಿಚಾರ ಮತ್ತು ಆದಿಶಂಕರಾಚಾರ್ಯರ ತತ್ವಗಳ ಪ್ರಭಾವ ಜ್ಯೋತಿಷ್ಯಾ ಸ್ತ್ರದ ಅಂಶಗಳು ಕಂಡುಬರುತ್ತವೆ.

ಗೌಡರ ವಿವಾಹದಲ್ಲಿ ಗಂಡು ಹೆಣ್ಣಿನ ನಿಶ್ಚಿತಾರ್ಥದಿಂದ ಹಿಡಿದು ಆಟಿ ಕೂರುವವರೆಗಿನ ಆಚಾರ ವಿಚಾರಗಳಿಗೆ ಹಿಂದೂ ಸಂಸ್ಕೃತಿಯ ಎಲ್ಲಾ ರೀತಿಯ ಆಚರಣೆಗಳು ಆಚರಿಸಲ್ಪಡುತ್ತವೆ. ಮದುವೆಯ ನಿಶ್ಚಿತಾರ್ಥದ ಸಮಯದಲ್ಲಿ ವೀಳ್ಯ ಬಳಸುವ ಶಾಸ್ತ್ರಕ್ರಮವು, ಪೂರ್ವಕಾಲದಲ್ಲಿ ರಾಜರು ತಮ್ಮ ಸಮಾನ ರಾದ ಮತ್ತು ಗೌರವಾನ್ವಿತ ವ್ಯಕ್ತಿಗಳನ್ನು ಸ್ವಾಗತಿಸುವಾಗ ಪೂರ್ಣಕುಂಭ, ಕಳಸ, ವೀಳ್ಯ, ಫಲ ಪುಷ್ಪಗಳನ್ನೊಳಗೊಂಡ ತಟ್ಟೆಯಲ್ಲಿ ಇಟ್ಟು ಸ್ವಾಗತಿಸುವ ಕುರುಹು ಈ ಶಾಸ್ತ್ರದಲ್ಲಿ ಕಂಡುಬರುತ್ತದೆ. ವೀಳ್ಯ ಶಾಸ್ತ್ರವೆಂದರೆ ವಿವಾಹ ಕಾರ್ಯಕ್ಕೆ ಗಂಡಿನ ಕಡೆಯವರು ವಿವಾಹ ನಿಶ್ಚಯದ ನಂತರ ಸಲಾವಳಿ ವೀಳ್ಯವನ್ನು ವರನ ಕಡೆಯವರು ವಧುವಿನ ಕಡೆಯ ಮುಖ್ಯಸ್ಥ ರಿಗೆ ಅರ್ಪಿಸುವುದು ವೀಳ್ಯ ಶಾಸ್ತ್ರಕ್ಕೆ ಆಹ್ವಾನ.

ಸಲಾವಳಿ ಎಂದರೆ ವಿವಾಹ ಮುನ್ನವೇ ಸುಗಮ ದಾಂಪತ್ಯ ಜೀವನನಡೆಸಲು ಪ್ರತಿ ವ್ಯಕ್ತಿಗೂ ಸಾಧ್ಯತೆಗಳೆಷ್ಟೆಂದು ತಿಳಿಯಲು ವಧೂವರರ ಜಾತಕಗಳ ಪರಿಶೀಲನೆ, ನಂತರ ಅವರ ನಕ್ಷತ್ರ, ರಾಶಿಗಳ ಹೋಲಿಕೆ. ಈ ನಕ್ಷತ್ರ ರಾಶಿಗಳ ಹೋಲಿಕೆ ನೋಡಲು 12 ಸೂತ್ರಗಳು. ಈ 12 ಸೂತ್ರಗಳನ್ನು ಕೂಟ ಗಳೆನ್ನುತ್ತಾರೆ. ಕೆಲವು ಕೂಟಗಳಿಗೆ ಅಂಕಗಳಿಲ್ಲ. ಹಾಗೆಂದ ಮಾತ್ರಕ್ಕೆ ಇವುಗಳ ಪ್ರಾಮುಖ್ಯತೆ ಇಲ್ಲವೆಂದಲ್ಲ. ಎಲ್ಲಾ ಕೂಟ ಗಳೂ ಯಾರಿಗೂ ಸಂಪೂರ್ಣವಾಗಿ ಹೊಂದುವುದಿಲ್ಲ. ಪ್ರಾಮುಖ್ಯವಾದ ಕೆಲವು ಕೂಟಗಳು ಹೊಂದಿದರೂ ಸಾಕು, ವಿವಾಹ ಮಾಡುವರು. ಒಟ್ಟು ಅಂಕಗಳಲ್ಲಿ 18 ಅತೀ ಕಡಿಮೆ ಅಂಕಗಳು. 18 ರಿಂದ 24 ಬಂದರೆ ಸಾಮಾನ್ಯ ಮಾನವ ಹೊಂದಾಣಿಕೆ. 24 ರಿಂದ 30ರವರೆಗೆ ಬಂದರೆ ದೇವತೆ ಗಳಂತೆಯೂ, 32 ರಿಂದ 34ರವರೆಗೆ ಬಂದರೆ ಶಿವಪಾರ್ವತಿಯ ರಂತೆಯೂ, ವೈವಾಹಿಕ ಜೀವನದಲ್ಲಿ ಸುಖಿಸುವರೆಂಬ ಅಭಿ ಪ್ರಾಯವಿರುವುದರಿಂದಲೇ ವಿವಾಹ ಕಾಲದಲ್ಲಿ ಸಪ್ತಪದಿ ಮಂತ್ರದ ಅರ್ಥ ಹೀಗಿದೆ :

1. 'ವೀರ್ಯವಂತನಾಗಿ ಮಹದೈಶ್ವರ್ಯವಂತನಾಗಿ ಸುಖ ಸಮೃದ್ಧಿಯಿಂದ ಸತ್ಸಂತಾನ ಪಡೆದ ಆಜೀವಪರ್ಯಂತ ಒಬ್ಬರನ್ನೊಬ್ಬರನ್ನಗಲದೆ ಜೀವನ ಸಂಗಾತಿಯಾಗಿ, ದೀರ್ಘಾ ಯಸ್ಸುಳ್ಳಸುಪುತ್ರರನ್ನು ಪಡೆದು ಸದಾ ಸಂತಸದಿಂದ ಕೂಡಿ ಬಾಳೋಣ '

2. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತು ರ್ವಿಧ ಪುರುಷಾರ್ಥಗಳ ಸಾಧನೆಯಲ್ಲಿ ಪತಿ–ಪತ್ನಿಯರು ಸಮ ಭಾಗಿಗಳು. ಶಾರೀರಿಕ, ಮಾನಸಿಕ ಹಾಗೂ ಅಧ್ಯಾತ್ಮಿಕ ಹೊಣೆ ಗಾರಿಕೆ ಭಾರತೀಯರಲ್ಲಿ ಒಂದು ಸುಭದ್ರ ಸಾಮಾಜಿಕ, ನೈತಿಕ ವ್ಯವಸ್ಥೆ, ಪ್ರೀತಿ–ಪ್ರೇಮ, ವಿಶ್ವಾಸ, ತ್ಯಾಗಗಳ ಬಾಂಧವ್ಯದ ಒಂದು ಪ್ರತೀಕ, ತ್ಯಾಗಗಳು ಗೃಹಸ್ಥಾಶ್ರಮ.

3. ದೇವಋಣ, ಪಿತೃಋಣ, ಋಷಿಋಣಗಳನ್ನು ತೀರಿ ಸಲು ಸತ್ಸಂತಾನ ಪ್ರಾಪ್ತಿಯಾಗಬೇಕು. ಇದಕ್ಕಾಗಿ ವಿವಾಹ ಒಂದು ಮೆಟ್ಟಿಲು.

4. ಯಾವನೊಬ್ಬನು ತನ್ನ ಪತ್ನಿ, ತಾನು ಹಾಗೂ ತನ್ನ ಸಂತಾನದೊಂದಿಗೆ ಕೂಡಿ ಬಾಳುವನೋ ಅವನೇ ಪರಿ ಪೂರ್ಣ ಜೀವಿ–ಎಂದಿದ್ದಾನೆ ಧರ್ಮಶಾಸ್ತ್ರದ ಪ್ರತಿಪಾದಕನಾದ ಮನು.

5. ಯಾವನೊಬ್ಬನೂ ಅರ್ಧ ಮಾತ್ರವೇ ತಾನು, ಉಳಿದರ್ಧ ಅವನ ಪತ್ನಿಯಾಗುತ್ತಾಳೆ–ಎಂದಿದೆ ತೈತ್ರೇಯ ಬ್ರಾಹ್ಮಣ.

ದಾಂಪತ್ಯ ಜೀವನವೆಂದರೆ–ವಿಷಯ ಲಂಪಟನಾಗಿ, ಸ್ವೇಚ್ಛಾವರ್ತಿಗಳಾಗಿ, ಕಾಮಭೋಗಕ್ಕಾಗಿ ಹೊಂದಿಸಲಾದ ಹೆಣ್ಣು ಗಂಡುಗಳ ಸಂಬಂಧವಲ್ಲ. ಆದುದರಿಂದಲೇ ಗೌಡರ ವಿವಾಹ ಸಮಯದಲ್ಲಿ ಮುಹೂರ್ತ ಚಪ್ಪರಕ್ಕೆ 12 ಕಂಬ ಗಳನ್ನು ನೆಡುವುದು ಇದಕ್ಕೆ ಕಾರಣ 12 ಕೂಟಗಳ ಮತ್ತು 12 ರಾಶಿಗಳ ಆಶೀರ್ವಾದ ನೂತನ ವಧುವರರಿಗೆ ಇರಲಿ, ಅವರ ಸುಖಕರವಾದ ದಾಂಪತ್ಯಕ್ಕೆ 12 ಕೂಟಗಳ ಮತ್ತು 12 ರಾಶಿ ಗಳ, ನವಗ್ರಹಗಳ ಆಶೀರ್ವಾದ ಇರಲೆಂಬ ಭಾವನೆಯೇ ಇದಕ್ಕೆ ಕಾರಣವಾಗಿದೆ.

ಲೇಖಕರು : ಪ್ರೊ॥ ಪೂಜಾರಿ ಮೊಣ್ಣಪ್ಪ, ಬೆಂಗಳೂರು.

[ ಮುಂದಿನ ಸಂಚಿಕೆ ನೋಡಿ ]

# ಸುಳ್ಯದ ಅಮರಕ್ರಾಂತಿ : ಸ್ವಾತಂತ್ರ್ಯದ ಪ್ರಥಮ ಮಹಾಯೋಧರು

1857, ಭಾರತದ ಸ್ವಾತಂತ್ರ್ಯದತ್ತ ಪ್ರಥಮ ಹೆಜ್ಜೆಯಾಗಿ ಕೇಳಿಬರುವ ಮತ್ತು ಗುರುತಿಸಲ್ಪಟ್ಟಂತಹ ವರ್ಷ. ಬ್ರಿಟಿಷರಿಂದ 'ಸಿಪಾಯಿದಂಗೆ' ಎಂದು ಹೆಸರಿಸಲ್ಪಟ್ಟು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ವೀರಯೋಧರ ಹೋರಾಟ ಇತಿಹಾಸದ ಪುಸ್ತಕಗಳಲ್ಲಿ ಮೈಲುಗಲ್ಲಾಗಿ ಉಳಿದಿದೆ.

ಆದರೆ ಬಹುತೇಕ ಕನ್ನಡ ಜಿಲ್ಲೆ ಜನರಿಗೆ ಈ ಘಟನೆಯು 20 ವರ್ಷದ ಹಿಂದೆ [ಅಂದರೆ 1837 ರಲ್ಲಿ] ತಮ್ಮ ಜಿಲ್ಲೆಯಲ್ಲಿಯೇ ಬ್ರಿಟಿಷ್ ಆಡಳಿತದ ವಿರುದ್ಧ ಪ್ರತಿಭಟನೆ ನಡೆದ ಬಗ್ಗೆ ಅರಿವಿದ್ದಂತಿಲ್ಲ. ಇತಿಹಾಸಕಾರರು ಈ ಬಗ್ಗೆ ಚಿಂತನೆ ಮಾಡದಿರುವುದು ಮತ್ತು ಜನರಲ್ಲಿನ ತಿಳುವಳಿಕೆಯ ಕೊರತೆ ಸುಳ್ಯದ ಅಮರಕ್ರಾಂತಿಯನ್ನು ಕತ್ತಲೆಯ ಕೂಪಕ್ಕೆ ತಳ್ಳಿದೆ.

ಸ್ವಾತಂತ್ರ್ಯಕ್ಕೆ ಮೊದಲು ಮತ್ತು ನಂತರ ಬರೆದ ಇತಿಹಾಸದ ಪುಸ್ತಕಗಳೆಲ್ಲವೂ ಈ ಘಟನೆಯನ್ನು ಸಂಪೂರ್ಣವಾಗಿ ಕಡೆಗಣಿಸಿದೆ,ಬ್ರಿಟೀಷರ ಪ್ರಭಾವಕ್ಕೆ ಒಳಪಟ್ಟು ಚರಿತ್ರಾಕಾರರು ಈ ಘಟನೆಯನ್ನು 'ಕಲ್ಯಾಣಪ್ಪನ ದಂಗೆ' ಅಥವಾ ಕಲ್ಯಾಣಪ್ಪನ ಕಾಟುಕಾಯಿ ಎಂದು ಗುರುತಿಸಿದರು.

ಹೀಗಿದ್ದರೂ ಕನ್ನಡ ಜಿಲ್ಲೆ ಮತ್ತು ಕೊಡಗಿನ ಗಡಿ ಪ್ರದೇಶದ ಜನರ ಉತ್ಸಾಹಿ ತಂಡ ಇತಿಹಾಸಕ್ಕಾದ ಅನ್ಯಾಯವನ್ನು ಸರಿಪಡಿಸುವಲ್ಲಿ ಪ್ರಯತ್ನ ಪ್ರಾರಂಭಿಸಿತು. ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಯ ಗಡಿಯಲ್ಲಿರುವ ಸಂಪಾಜೆಯ ನಂಜಯ್ಯನ ಮನೆ ಸಣ್ಣಯ್ಯ ದೇವಿಪ್ರಸಾದ ಪ್ಲಾಂಟರ್, ಸಾಮಾಜಿಕ ಕಾರ್ಯಕರ್ತ, ರಂಗ ಉತ್ಸಾಹಿ ಮತ್ತು ಸಿನೆಮಾ ನಿರ್ಮಾಪಕ ಮತ್ತು ಜನಾರ್ಧನ ಕಣಕ್ಕೂರು ಮೊದಲಾದವರು ಇದರತ್ತ ಹೆಚ್ಚಿನ ಮುತುವರ್ಜಿ ವಹಿಸಿದರು.

ಬ್ರಿಟೀಷ್ ಸರಕಾರಕ್ಕೆ 30-11-1837ರಲ್ಲಿ ಮಂಗಳೂರಿನಲ್ಲಿ ಕಲೆಕ್ಟರ್ ಆಗಿದ್ದ ಲೆವಿನ್ ಎಂಬಾತ ಸಲ್ಲಿಸಿದ ವರದಿಯ ಆಧಾರದಲ್ಲಿ ಈ ಚಳವಳಿ ಸಂಪೂರ್ಣವಾಗಿ ವಸಾಹತುಶಾಹಿ ವಿರುದ್ಧ ಬಂಡೆದ್ದ ದಂಗೆ ಎಂದು ಗುರುತಿಸಲ್ಪಟ್ಟಿತು.

ಈ ಚಿರಸ್ಮರಣೀಯ ಘಟನೆಗೆ ಆಧಾರವಾಗಿರುವುದು ರೆವರೆಂಟ್ ಜಿ ರಿಚ್‌ಟರ್‌ರವರ 'ಕೂರ್ಗ್ ಗೆಜೆಟಿಯರ್',ಕನ್ನಡ ಭಾಷಾಶಾಸ್ತ್ರಜ್ಞರಾದ ತಿ. ತಾ. ಶರ್ಮರವರ 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಮತ್ತು ಕನ್ನಡ ಲೇಖಕ ಹಾಗೂ ಕಾದಂಬರಿಕಾರ ನಿರಂಜನ ಕಾವ್ಯನಾಮದಿಂದ ಖ್ಯಾತರಾದ ದಿ॥ ಕುಳಕುಂದ ಶಿವರಾವ್‌ರವರು.

ಅನೇಕ ಶತಮಾನಗಳಿಂದಲೂ ಸುಳ್ಯ ಮತ್ತು ಅದರ ನೆರೆಯ ಪ್ರದೇಶಗಳು ಕೃಷಿ ಪ್ರಧಾನವಾದವುಗಳು. ಸಣ್ಣ ಸಣ್ಣ ಹೊಳೆ, ತೊರೆಗಳನ್ನು ಹೊಂದಿದ್ದು ವರ್ಷಪೂರ್ತಿ ನೀರಿನ ಸೌಲಭ್ಯ ದೊರೆಯುವಂತದ್ದು, ಸಮೃದ್ಧವಾಗಿ ಬೆಳೆ ಬೆಳೆಯುತ್ತಿದ್ದು, ಐತಿಹಾಸಿಕವಾಗಿ 'ಅಮರಸುಳ್ಯ' ಎಂಬ ಹೆಸರಿನಿಂದ ಗುರುತಿಸಲ್ಪಟ್ಟಿದೆ.

19ನೆಯ ಶತಮಾನದ ಅಂತ್ಯದಲ್ಲಿ ಕೆನರಾ ಜಿಲ್ಲೆಗಳ ರಚನೆಯಾಗುವುದಕ್ಕೆ ಮೊದಲು ಸುಳ್ಯ ಮತ್ತು ಇತರ ಹಳ್ಳಿಗಳು ಕೊಡಗಿನ ಒಂದು ಭಾಗವಾಗಿದ್ದವು. 1799ರಲ್ಲಿ ಶ್ರೀರಂಗಪಟ್ಟಣದಲ್ಲಿ ಬ್ರಿಟೀಷರಿಂದ ಕೊಲ್ಲಲ್ಪಟ್ಟ ಟಿಪ್ಪುಸುಲ್ತಾನು ಕೊಡಗಿನಲ್ಲಿ ಬ್ರಿಟೀಷರ ಆಡಳಿತವನ್ನು ವಿರೋಧಿಸುತ್ತಿದ್ದ. ಸುಳ್ಯವು ಕೊಡಗಿನ ಒಂದು ಭಾಗವಾದ ಕಾರಣ ಸುಲ್ತಾನ ಮತ್ತು ಅವನ ಸಾಮಂತರ ಪ್ರಭಾವ ಇಲ್ಲೂ ಇತ್ತು. ಟಿಪ್ಪುವಿನ ಮರಣಾನಂತರ ಬ್ರಿಟೀಷರು ಸಾಮಂತರನ್ನು ತಡೆಹಿಡಿಯಲು ಪ್ರಯತ್ನ ಪ್ರಾರಂಭಿಸಿದರು.

ಟಿಪ್ಪುಸುಲ್ತಾನನ ನಂಬುಗೆಯ ಐಗೂರು ವೆಂಕಟಾದ್ರಿ ನಾಯಕನನ್ನು ಸೆರೆಹಿಡಿಯುವಲ್ಲಿ ಗವರ್ನರ್ ಜನರಲ್ ರಿಚರ್ಡ್ ಕೂಲೆ ವೆಲ್ಲೆಸ್ಲಿಯ ಪ್ರಯತ್ನ ಸಫಲವಾಗದೆ ಕೊನೆಗೆ ಸುಲ್ತಾನನ ಮಂತ್ರಿ ಪೂರ್ಣಯ್ಯನ ಸಹಾಯದಿಂದ ಸೆರೆಹಿಡಿದು, ನಾಯಕನನ್ನು ಫೆಬ್ರವರಿ 10, 1802ರಲ್ಲಿ ಗಲ್ಲಿಗೇರಿಸಲಾಯಿತು. ಐಗೂರಿಗೆ ಅಧೀನದಲ್ಲಿದ್ದ ಸುಳ್ಯ ಮತ್ತು ನೆರೆಯ ಪ್ರದೇಶಗಳು ಆಗ ಕೊಡಗಿನ ಅಧೀನಕ್ಕೆ ಒಳಪಟ್ಟವು.

ಜನಪ್ರಸಿದ್ಧ ಸಾಮಂತ ವೆಂಕಟಾದ್ರಿ ನಾಯಕನ ಶಿರಚ್ಛೇದನ ಅಮರ ಕ್ರಾಂತಿಯನ್ನು ಹುಟ್ಟುಹಾಕಿತು. ಹುಲಿಕೊಂದ ನಂಜಯ್ಯನ ನಾಯಕತ್ವದಲ್ಲಿ ಬ್ರಿಟೀಷರ ವಿರುದ್ಧ ಹೋರಾಟಕ್ಕೆ ಹೈದರಾಬಾದ್, ಲಾಹೋರ್, ದಿಲ್ಲಿ ಮೊದಲಾದ ಪ್ರದೇಶಗಳನ್ನೊಳಗೊಂಡು ಸಂಚು ನಡೆಸಲಾಯಿತು.

ಕೊಡಗನ್ನು ಆಳುತ್ತಿದ್ದ ಚಿಕ್ಕವೀರರಾಜನನ್ನು ಬ್ರಿಟೀಷರು ಅಧಿಕಾರದಿಂದ ತೆಗೆದುಹಾಕಿದರು. ಆದರೆ ಚಿಕ್ಕವೀರರಾಜನೇ ಜನಪ್ರಿಯ ನಾಯಕನಾಗಿದ್ದುದರಿಂದ ಆತನನ್ನು

[9ನೇ ಪುಟ ನೋಡಿ]

# ಆರೋಗ್ಯ ಚಿಂತನ :

## ಹೆಚ್ಚು ರಕ್ತದೊತ್ತಡ [B.P][Hypertension]

ನಿನ್ನೆ ನೀನ್ ಸಾವಿಗೆ ಹೋಗಿದ್ದಲ್ಲಾ, ಆ ರಾಮಣ್ಣ ಹೆಂಗೆ ಸತ್ತದ್ ಗಡ ?

ಪೆಟ್ಟ್ ಸಿಕ್ಕಿದಾ ! ಬೋಜಿ ಚಂದ್ರಮ್ಮನ ಕೇಳ್ದಕ್ಕೆ ಚಂದ್ರಮ್ಮ ಕೊಟ್ಟ ಉತ್ತರ ಹಿಂಗಿತ್ತ್.

'ಅದ್ ಪೆಟ್ಟ್‌ಸಿಕ್ಕೀ ಸತ್ತದ್ ಇರೋಕು. ಆ ರಾಮಣ್ಣಂಗೆ 70 ವರ್ಷಗಡ. ಲಾಯ್ಕ ಓಡಾಡಿಕಂಡೇ ಇದ್ದಂವ. ಮೊನ್ನೆ ಮನೆ ಹೊರಗೆ ನಡ್‌ಕಂಡ್ ಹೋಕನ ಇದ್ದಕ್ಕಿದ್ದಂಗೆ ಬಿದ್ದ್ ಹೋತ್‌ಗಡ ! ಕೈಕಾಲ್ ಸ್ವಾಧೀನ ಕಳ್‌ಕಂಡ್ ಮತ್ತೆ ಸೊಯೆನೇ ಬಾತ್‌ಲೆಗಡ. ಕೂಡಲೇ ಹರಕೆ ಹೊತ್ತ್‌ಕಂಡ್ ಮಂತ್ರಿಸಿದ ಬೂದಿ ತಂದ್ ಹಚ್ಚಿರೂ

ಡಾ|| ಎನ್. ಎಸ್. ಪ್ರವೀಣ, ಎಂ.ಬಿ.ಬಿ.ಎಸ್., ಎಂ.ಡಿ.

ಸೊಯೆ ಬಾತ್ಲೆಗಡ! ಮತ್ತೆ ಆಸ್ಪತ್ರೆಗೆ ತಗಂಡೊದಗಡ. ಅಲ್ಲಿ ಡಾಕ್ಟ್ರು ನೋಡಿ ಬಿ.ಪಿ. ಬಾರಿ ಹೆಚ್ಚು ಉಟ್ಟು, ಅದ್ಕ್ಯಾಗಿ ಮೆದುಳ್‌ಲಿ ರಕ್ತಸ್ರಾವ ಆಗುಟ್ಟು, ಬಾರಿ ಸೀರಿಯಸ್, ಬದುಕುದು ಕಷ್ಟ ಅಂತ ಹೇಳ್ದೊ ಗಡ. ಒಟ್ಟಿಗೆ, ಇಷ್ಟ ವರ್ಷ ನೀವು ಒಮ್ಮೆ ಸಹ ಅವರ ಬಿ. ಪಿ. ಚೆಕ್ ಮಾಡ್ಸಿಲ್ವಲ್ಲಾತ ಮಕ್ಕಳಿಗೆ ಸಮಾ ಬೊಯ್ದೊಗಡ. ಆಸ್ಪತ್ರೆಲಿ ನಿನ್ನೆ ಬೆಳಿಗ್ಗೆ ರಾಮಣ್ಣ ಸತ್ತೇಹೋತು ಗಡ.'

'ಅದ್ ಎಂತ ಬಿ.ಪಿ.ನೋ, ಅವಂಗೆ ಬಲಾದ ಪೆಟ್ಟ್ ಸಿಕ್ಕಿದೇ ಇರೋಕಪ್ಪ !' ಬೋಜಿ ಸಹ ಚಂದ್ರಮ್ಮನ ಕಡೆ ಸೇರಿಕಣ್ತ್.

ಮೇಲಿನ ರೀತಿಯ ಘಟನೆಗಳನ್ನು ನೀವು ಹಲವಾರು ಬಾರಿ ಕೇಳಿರಬಹುದಲ್ಲವೆ ? ರಾಮಣ್ಣನಿಗೆ ಅಧಿಕವಾದ ರಕ್ತದೊತ್ತಡ ಹಲವಾರು ವರ್ಷದಿಂದ ಇದ್ದು ಪರೀಕ್ಷೆ ಮಾಡಿಸಿಕೊಳ್ಳದೆ, ಔಷಧ ತೆಗೆದುಕೊಳ್ಳದೆ ಇದ್ದುದರಿಂದ ಮೆದುಳಿನಲ್ಲಿ ರಕ್ತಸ್ರಾವವಾಗಿ ಆತ ಸತ್ತಿದ್ದಾನೆಯೇ ಹೊರತು ಆತ ಬೋಜಿ ಮತ್ತು ಚಂದ್ರಮ್ಮ ಅಂದುಕೊಂಡಂತೆ ಪೆಟ್ಟು ಸಿಕ್ಕಿ ಸತ್ತದ್ದಲ್ಲ. ಇದಕ್ಕೆ ರಾಮಣ್ಣ ಮತ್ತು ಆತನ ಮನೆಯವರ 'ಆರೋಗ್ಯದ ಬಗೆಗಿನ' ನಿರ್ಲಕ್ಷ್ಯವೇ ಕಾರಣ.

ಸಾಮಾನ್ಯವಾಗಿ 50 ವರ್ಷದ ಮೇಲ್ಪಟ್ಟವರಲ್ಲಿ ಅಧಿಕ ರಕ್ತದೊತ್ತಡ ಕಾಣಿಸಿಕೊಳ್ಳುತ್ತದಾದರೂ, ಜಾಸ್ತಿ ದಪ್ಪಗಿರುವವರಲ್ಲಿ, ಮನೆತನದಲ್ಲಿ ಇತರರಿಗೂ ಅಧಿಕ ರಕ್ತದೊತ್ತಡ ಇದ್ದಲ್ಲಿ ಈ ತೊಂದರೆ ಯಾವ ವಯಸ್ಸಿನಲ್ಲೂ ಕಾಣಿಸಿಕೊಳ್ಳಬಹುದು. ಹೆಚ್ಚು ರಕ್ತದ ಒತ್ತಡವಿದ್ದರೆ ಸಮಸ್ಯೆಗಳು ಅನೇಕ. ಹೃದ್ರೋಗ ಮೂತ್ರಕೋಶದ ರೋಗ, ಹೃದಯಾಘಾತ, ಮೆದುಳಿನಲ್ಲಿ ರಕ್ತಸ್ರಾವ, ಲಕ್ವಾ ಹೊಡೆಯುವುದು ಈ ರೀತಿ ಅನೇಕ ದುಷ್ಪರಿಣಾಮಗಳು ಉಂಟಾಗಬಹುದು. ಕೆಲವೊಮ್ಮೆ ರಕ್ತದೊತ್ತಡದೊಂದಿಗೆ 'ಡಯಾಬಿಟಿಸ್' [ಸಿಹಿ ಮೂತ್ರರೋಗ] ಸಹ ಇರಬಹುದು.

ಆರೋಗ್ಯವಂತ ವ್ಯಕ್ತಿಯ ರಕ್ತದೊತ್ತಡ '120/80 mm Hg' ಇರುತ್ತದೆ. ಈ ಸಂಖ್ಯೆ ಸ್ವಲ್ಪ ಏರುಪೇರಾಗುವುದು ಸಾಮಾನ್ಯ. ಸಾಮಾನ್ಯವಾಗಿ ವಯಸ್ಸಾದಂತೆ ರಕ್ತದೊತ್ತಡ ಸ್ವಲ್ಪ ಹೆಚ್ಚತೊಡಗುತ್ತದೆ. ರಕ್ತದೊತ್ತಡ 160/95 mm Hg ಗಿಂತಲೂ ಜಾಸ್ತಿಯಿದ್ದಲ್ಲಿ ವ್ಯಕ್ತಿಗೆ ಹೆಚ್ಚು ರಕ್ತದೊತ್ತಡ ಇದೆ ಎನ್ನಬಹುದು.

ರಕ್ತದೊತ್ತಡವಿರುವ ಶೇ. 90 ರಷ್ಟು ರೋಗಿಗಳಲ್ಲಿ ರಕ್ತದೊತ್ತಡಕ್ಕೆ ಸರಿಯಾದ ಕಾರಣ ಹೇಳುವುದೇ ಕಷ್ಟ [Essentail Hypertension]. ಉಳಿದ ಶೇ. 10 ಜನರಲ್ಲಿ ಮೂತ್ರಜನಕಾಂಗಕ್ಕೆ ಸಂಬಂಧಿಸಿದ ತೊಂದರೆ, ಅಡ್ರಿನಲ್ ಗ್ರಂಥಿಯ ಗೆಡ್ಡೆ, ರಕ್ತನಾಳಕ್ಕೆ ಸಂಬಂಧಿಸಿದ ಕೆಲವೊಂದು ನ್ಯೂನತೆ, ಕೆಲವೊಂದು ಹಾರ್ಮೋನ್‌ಗಳ ಸ್ರವಿಸುವಿಕೆಯಲ್ಲಿ ಏರುಪೇರಾಗಿರುವುದು.... ಇತ್ಯಾದಿ ಕಾರಣಗಳಿರಬಹುದು. ಡಯಾಬಿಟಿಸ್ ರೋಗಿಗಳಲ್ಲಿ ಸಹ ಇದು ಕಂಡುಬರುವ ಸಾಧ್ಯತೆ ಜಾಸ್ತಿ. ಮನೆತನದಲ್ಲಿ ಇತರರಿಗೆ [ತಂದೆ, ತಾಯಿ, ಅಜ್ಜ, ಅಜ್ಜಿ ಇತ್ಯಾದಿ] ಅಧಿಕ ರಕ್ತದೊತ್ತಡ ಇದ್ದಲ್ಲಿ ಸಹ ಈ ತೊಂದರೆ ಕಾಣಿಸಿಕೊಳ್ಳುವ ಸಾಧ್ಯತೆ ಜಾಸ್ತಿ. ಗರ್ಭಿಣಿಯರಲ್ಲೂ ಕೆಲವೊಮ್ಮೆ ಹೆಚ್ಚು ರಕ್ತದೊತ್ತಡ ಕಾಣಿಸಿಕೊಳ್ಳುತ್ತದೆ.

ಜಾಸ್ತಿ ದಪ್ಪಗಿರುವವರಿಗೆ ಈ ಸಾಧ್ಯತೆ ಜಾಸ್ತಿ. ಅತಿಯಾದ ಉಪ್ಪಿನ ಬಳಕೆ, ಕೊಲೆಸ್ಟರಾಲ್ ಜಾಸ್ತಿ ಇರುವ ಎಣ್ಣೆ, ಕೊಬ್ಬಿನ ಬಳಕೆ, ಬೀಡಿ, ಸಿಗರೇಟ್ ಸೇದುವಿಕೆ, ಆಲ್ಕೋಹಾಲ್ ಸೇವನೆ ಸಹ ರಕ್ತದೊತ್ತಡವನ್ನು ಹೆಚ್ಚಿಸಬಹುದು. ಸೋಮಾರಿತನದ ಜೀವನ ಶೈಲಿ, ವ್ಯಕ್ತಿ ಯಾವಾಗಲೂ

ಉದ್ವೇಗ,ಆತಂಕ, ಗಾಬರಿ ಸ್ಥಿತಿಯಲ್ಲಿರುವಿಕೆ ಸಹ ರಕ್ತದೊತ್ತಡ ವನ್ನು ಏರಿಸಬಹುದು.

**ಹೆಚ್ಚು ರಕ್ತದೊತ್ತಡದ ಚಿನ್ಹೆಗಳು :**

ಕೆಲವೊಮ್ಮೆ ಹೆಚ್ಚು ರಕ್ತದೊತ್ತಡ ಇದ್ದರೂ ವ್ಯಕ್ತಿಗೆ ಯಾವುದೇ ತೊಂದರೆ ಇಲ್ಲದಿರಬಹುದು ! ಉಳಿದವರಲ್ಲಿ ಪದೇ ಪದೇ ತಲೆನೋವು ಬರುತ್ತಿರುತ್ತದೆ. ತಲೆ ಸುತ್ತು, ಕಣ್ಣು ಮಂಜಾಗುವುದು ಸಹ ಇರಬಹುದು. ಸುಸ್ತು, ಎದೆನೋವು ಕಾಣಿಸಿಕೊಳ್ಳಬಹುದು. ಸ್ವಲ್ಪ ದೇಹ ಶ್ರಮಕ್ಕೂ ಹೃದಯ ಬಡಿತ ಏರಿ ಉಸಿರಾಟ ಕಷ್ಟವಾಗಬಹುದು.

ಬಹಳ ವರ್ಷಗಳಿಂದ ಹೆಚ್ಚಿನ ರಕ್ತದೊತ್ತಡ ಇದ್ದು ಸರಿ ಯಾಗಿ ಔಷಧ ತೆಗೆದುಕೊಳ್ಳದಿದ್ದಲ್ಲಿ ಹಲವಾರು ತೊಂದರೆಗಳು ಉದ್ಭವಿಸಬಹುದು. ಮೆದುಳಿನಲ್ಲಿ ರಕ್ತಸ್ರಾವ, ಅಥವಾ ಮೆದುಳಿಗೆ ರಕ್ತ ಸರಬರಾಜಿನಲ್ಲಿ ಏರುಪೇರಾಗುವಿಕೆ ಇತ್ಯಾದಿ ಆಗುವುದರ ಮೂಲಕ ವ್ಯಕ್ತಿಗೆ ಪಾರ್ಶ್ವವಾಯು ಆಗಬಹುದು. ಕಣ್ಣಿನ ರೆಟಿನಾದಲ್ಲಿನ ರಕ್ತನಾಳಗಳು ಗಡುಸಾಗಿ ವ್ಯಕ್ತಿಗೆ ದೃಷ್ಟಿ ದೋಷ ಕಾಣಿಸಿಕೊಳ್ಳಬಹುದು. ಹೃದಯರೋಗ, ಹೃದಯಾ ಘಾತ ಕಾಣಿಸಿಕೊಳ್ಳಬಹುದು. ಮೂತ್ರಜನಕಾಂಗದ ಕಾರ್ಯ ದಲ್ಲಿ ಏರುಪೇರಾಗಿ ಕೊನೆಗೆ ಪೂರ್ತಿಯಾಗಿ ಕಟ್ಟು ಹೋಗಬಹುದು [Kidney Failure].

**ರೋಗ ತಡೆ ಮತ್ತು ಚಿಕಿತ್ಸೆ :**

40 ವರ್ಷಕ್ಕೆ ಮೇಲ್ಪಟ್ಟವರು ಆಗಾಗ ರಕ್ತದೊತ್ತಡ ವನ್ನು ಪರೀಕ್ಷಿಸಿಕೊಳ್ಳಬೇಕು. ರಕ್ತದೊತ್ತಡ ಇದ್ದಲ್ಲಿ ವೈದ್ಯರ ಸಲಹೆಯಂತೆ ಮೂತ್ರದ ಪರೀಕ್ಷೆ, ಮೂತ್ರಜನಕಾಂಗದ ಕಾರ್ಯದ ಬಗೆಗಿನ ಪರೀಕ್ಷೆ, ಇ.ಸಿ.ಜಿ., ಕಣ್ಣಿನ ಪರೀಕ್ಷೆ ಇತ್ಯಾದಿ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಹಾಗೂ ವೈದ್ಯರ ಸಲಹೆಯಂತೆ ಮಾತ್ರೆಗಳನ್ನು ಪ್ರತಿದಿನವೂ ತಪ್ಪದೆ ಉಪಯೋಗಿಸಬೇಕು. ಒಮ್ಮೆ ವ್ಯಕ್ತಿಗೆ ಹೆಚ್ಚು ರಕ್ತ ದೊತ್ತಡ ಇದೆಯೆಂದು ದೃಢವಾಯಿತೆಂದರೆ, ಆ ಕಾಯಿಲೆ ಅವನಿಗೆ ಜೀವನಪೂರ್ತಿ ಇರುತ್ತದೆ. ರಕ್ತದೊತ್ತಡವನ್ನು ಪೂರ್ತಿ ಗುಣಪಡಿಸಲು ಸಾಧ್ಯವಿಲ್ಲ. ಆದರೆ ಇದನ್ನು ಸುಲಭ ವಾಗಿ ಹತೋಟಿಯಲ್ಲಿಟ್ಟುಕೊಳ್ಳಬಹುದು. ಇದನ್ನು ಎಲ್ಲಾ ರೋಗಿಗಳು ಹಾಗೂ ಆತನ ಮನೆಯವರು ಅರಿಯಬೇಕಾದುದು ಬಹಳ ಪ್ರಾಮುಖ್ಯವಾದದ್ದು.

ಇಂದು ಹೆಚ್ಚಿನ ರಕ್ತದೊತ್ತಡಕ್ಕೆ ಹಲವಾರು ಔಷಧ ಗಳಿದ್ದು, ಅವು ಅತ್ಯಂತ ಪರಿಣಾಮಕಾರಿಯಾಗಿವೆ. ಈ ಔಷಧಗಳನ್ನು ರೋಗಿಯು ವೈದ್ಯರ ಸಲಹೆಯಂತೆ ಜೀವನ ಪರ್ಯಂತ ಉಪಯೋಗಿಸಬೇಕಾಗುತ್ತದೆ. ರೋಗಿಗೆ ಜೊತೆಗೆ 'ಡಯಾಬಿಟೆಸ್'' ರೋಗ ಸಹ ಇದ್ದಲ್ಲಿ ಅದಕ್ಕೂ ತಪ್ಪದೇ ಜೀವನಪರ್ಯಂತ ಔಷಧ ಉಪಯೋಗಿಸಬೇಕು.

ರೋಗಿ ಜಾಸ್ತಿ ಉಪ್ಪಿನ ಆಹಾರ ಬಳಸಬಾರದು. ಆಹಾರಕ್ಕೆ ಉಪ್ಪು ಬಳಸಿಕೊಳ್ಳುವಿಕೆ, ಉಪ್ಪಿನಕಾಯಿ, ಒಣ ಮೀನು... ಇತ್ಯಾದಿ ಉಪಯೋಗಿಸಬಾರದು. ಆಹಾರ ಬೇಯಿಸು ವಾಗ ಸಹ ಕಡಿಮೆ ಉಪ್ಪು ಬಳಸಿದಲ್ಲಿ ಉತ್ತಮ. ರೋಗಿಗೆ ಬೀಡಿ, ಸಿಗರೇಟ್ ಅಭ್ಯಾಸವಿದ್ದಲ್ಲಿ ಖಂಡಿತ ನಿಲ್ಲಿಸಬೇಕು. ಜಾಸ್ತಿ ತೂಕವಿದ್ದಲ್ಲಿ ತೂಕ ಕಡಿಮೆ ಮಾಡಿಕೊಳ್ಳಬೇಕು. ಬೆಳಗಿನ ಜಾವದ ನಡಿಗೆ, ದಿನನಿತ್ಯ, ವ್ಯಾಯಾಮ, ಆಹಾರದ ಹತೋಟಿ ಯಿಂದ ಇದು ಸಾಧ್ಯ. ಬೆಣ್ಣೆ, ತುಪ್ಪ, ಮಾಂಸದ ಕೊಬ್ಬು, ಜಾಸ್ತಿ ಸಿಹಿ, ಎಣ್ಣೆಭರಿತ ಕರಿದ ತಿಂಡಿಗಳು, ಕೊಲೆಸ್ಟರಾಲ್ ಜಾಸ್ತಿ ಇರುವ ಎಣ್ಣೆ ಇತ್ಯಾದಿ ಆಹಾರ ಪದಾರ್ಥಗಳನ್ನು ಜಾಸ್ತಿ ಉಪಯೋಗಿಸಬಾರದು. ಸೂರ್ಯಕಾಂತಿ ಎಣ್ಣೆ ಉತ್ತಮ. ಅತಿಯಾಗಿ ಏನನ್ನೂ ತಿನ್ನಬಾರದು. ಸೊಪ್ಪು ತರಕಾರಿ, ಹಣ್ಣುಗಳನ್ನು ತಿನ್ನಬಹುದು.

ವ್ಯಕ್ತಿ ಜಾಸ್ತಿ ಉದ್ವೇಗ, ಆತಂಕಕ್ಕೆ ಈಡಾಗಬಾರದು. ಎಲ್ಲ ಸಂದರ್ಭಗಳಲ್ಲೂ ಶಾಂತವಾಗಿ ಇರಬೇಕು !

ಒಟ್ಟಿನಲ್ಲಿ ಹೇಳಬೇಕಾದರೆ, ನಿಮ್ಮ ಜೀವನ ಹೆಚ್ಚು ಆರೋಗ್ಯ ಪೂರ್ಣವಾಗಿಯೂ, ಹೆಚ್ಚು ಕಾಲ ಬದುಕಬೇಕಾ ದಲ್ಲಿ ಕೆಳಗಿನ ಅಂಶಗಳನ್ನು ಪಾಲಿಸಿ :

1. ಪೌಷ್ಟಿಕ ಆಹಾರವನ್ನು ತಿನ್ನಿ, ಆದರೆ ತೀರ ದಪ್ಪ ಗಾಗದಂತೆ ನೋಡಿಕೊಳ್ಳಿ.
2. ಬೀಡಿ ಸಿಗರೇಟು ಬೇಡ.
3. ಮದ್ಯಪಾನ ಸೇವಿಸಬೇಡಿ.
4. ದೈಹಿಕವಾಗಿಯೂ, ಮಾನಸಿಕವಾಗಿಯೂ ಚಟು ವಟಿಕೆಯಿಂದಿರಿ.
5. ವಿಶ್ರಾಂತಿ ಮತ್ತು ಸಾಕಷ್ಟು ನಿದ್ದೆ ಇರಲಿ.
6. ಚಿಂತೆ, ಉದ್ವೇಗಕ್ಕೊಳಪಡದೇ ಆರಾಮವಾಗಿರಲು ಕಲಿಯಿರಿ.
7. ದಿನನಿತ್ಯದ ಜೀವನದಲ್ಲಿ ಸಾಕಷ್ಟು ಮನರಂಜನೆ ಇರಲಿ ಪತ್ರಿಕೆ, ಪುಸ್ತಕ ಓದುವುದು, ಹಾಡು ಕೇಳುವಿಕೆ ದೂರ ದರ್ಶನ ನೋಡುವುದು. ಸಮಸ್ಯೆಗಳನ್ನು ಸ್ನೇಹಿತರೊಂದಿಗೆ,

[8ನೇ ಪುಟ ನೋಡಿ]

## ಸಮಾರಂಭಗಳು—ಒಂದು ಅನಿಸಿಕೆ

ನಮ್ಮ ಸಮಾಜದಲ್ಲಿ ವರ್ಷವಿಡೀ ಒಂದಲ್ಲೊಂದು ಸಮಾರಂಭಗಳು ನಡೆಯುತ್ತಲೇ ಇರುತ್ತವೆ. ಕ್ರೀಡಾ ಸಮಾರಂಭ, ಮದುವೆಯ ಸಮಾರಂಭ, ಹಬ್ಬ ಹರಿದಿನಗಳ ಸಮಾರಂಭ ಹಾಗೂ ಇನ್ನಿತರ ಅನೇಕ ಸಾಂಸ್ಕೃತಿಕ ಸಮಾರಂಭಗಳು ವಿವಿಧ ಋತುಗಳಲ್ಲಿ ನಡೆಯುತ್ತಲೇ ಇರುತ್ತವೆ.

ಕ್ರೀಡೆಯಾಗಲಿ, ನಾಡಹಬ್ಬವಾಗಲಿ ಅಥವಾ ಇನ್ನಿತರ ಯಾವುದೇ ಸಾಂಸ್ಕೃತಿಕ ಸಮಾರಂಭಗಳೇ ಆಗಲಿ, ಅವುಗಳ ಮೂಲ ಉದ್ದೇಶ ಜನರನ್ನು ಸಂಘಟಿಸುವುದು, ಜನರಲ್ಲಿ ಸಂಘಟಿತ ಭಾವನೆಯನ್ನು ಮೂಡಿಸುವುದು. ನಮ್ಮ ಸಮಾಜ ವಿವಿಧ ವರ್ಗಗಳಿಂದ, ಅಂದರೆ ವಿವಿಧ ವೃತ್ತಿಗಳನ್ನು ಮಾಡುವಂತ ಜನರಿಂದ ಆದಂತ ಒಂದು ಸಮೂಹ. ಈ ವಿವಿಧ ವರ್ಗಗಳನ್ನು ಒಟ್ಟುಗೂಡಿಸಿ ಅವರಲ್ಲಿ ಪರಸ್ಪರ ಸೌಹಾರ್ದತೆಯನ್ನು ಮೂಡಿಸುವಂತ ದೃಷ್ಟಿಕೋನವನ್ನು ಇಟ್ಟುಕೊಂಡು, ನಮ್ಮ ಹಿರಿಯರು ವಿವಿಧ ಹಬ್ಬ ಹರಿದಿನಗಳನ್ನು ನಿಮಿತ್ತ ಮಾಡಿಕೊಂಡು ಇಂತಹ ಸಭೆ ಸಮಾರಂಭಗಳನ್ನು ಏರ್ಪಡಿಸುತ್ತಿದ್ದರು.

ವರ್ಷವಿಡೀ ನಾವು ನಮ್ಮದೇ ಆದಂತಹ ವ್ಯವಹಾರಿಕ ಜಂಜಾಟದಲ್ಲಿ ಸಿಕ್ಕಿಹಾಕಿಕೊಂಡಿರುತ್ತೇವೆ. ಇದರಿಂದಾಗಿ ನಾವು ದೈಹಿಕವಾಗಿಯೂ, ಮಾನಸಿಕವಾಗಿಯೂ ದಣಿದಿರುತ್ತೇವೆ. ಇಂತಹ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ನಮ್ಮ ಸುಖ ದುಃಖಗಳನ್ನು ನಮ್ಮ ಆತ್ಮೀಯರೊಡನೆ ಹಂಚಿಕೊಂಡು ಅಲ್ಲಿ ನಡೆಯುವಂತಹ ಮನೋರಂಜನೆಗಳನ್ನು ನೋಡಿ ಅನುಭವಿಸಿ ಆನಂದಿಸುವುದರಿಂದ ನಮ್ಮ ಮಾನಸಿಕ ಒತ್ತಡವು ಕಡಿಮೆಯಾಗಿ ನಮ್ಮ ದೇಹ ಹಾಗು ಮನಸ್ಸುಗಳಿಗೆ ಹೊಸ ಚೈತನ್ಯ ಮತ್ತು ದುಡಿಯಲು ಸ್ಫೂರ್ತಿ ಉಂಟಾಗುತ್ತವೆ.

ವರ್ಷಕ್ಕೊಮ್ಮೆ ನಾಡ ಹಬ್ಬಗಳು ಎಲ್ಲಾ ಊರಿನಲ್ಲಿ ನಡೆಯುತ್ತದೆ. ಊರವರು ವರ್ಷಕ್ಕೆ ಒಮ್ಮೆಯಾದರೂ ಒಟ್ಟು ಸೇರಲಿ, ಪರಸ್ಪರ ಸುಖ ದುಃಖಗಳನ್ನು ಹಂಚಿಕೊಳ್ಳಲಿ ಎಂಬ ಉದ್ದೇಶವು ಆಗಿರುತ್ತದೆ ಅದೇ ರೀತಿ ಎಲ್ಲಾ ಊರುಗಳಲ್ಲಿ ಒಂದೇ ದಿನದಲ್ಲಿ ಹಬ್ಬ ನಡೆಯುವುದಿಲ್ಲ. ಬೇರೆ ಬೇರೆ ದಿನ ನಡೆಯುತ್ತದೆ. ಕಾರಣ ಈ ಊರಿನವರು ಆ ಊರಿಗೆ ಹೋಗಬೇಕು, ಆ ಊರಿನವರು ಈ ಊರಿಗೆ ಬರಬೇಕು. ವಿಷಯಗಳನ್ನು ಚರ್ಚಿಸಬೇಕು. ಒಲಂಪಿಕ್‌ನಂತಹ ಬೃಹತ್ ಕ್ರೀಡಾಕೂಟಗಳು ಕೂಡ ದೇಶ ದೇಶಗಳ ಮಧ್ಯೆ ಸೌಹಾರ್ದತೆಯನ್ನು ಮೂಡಿಸುವಂತಹ ದೃಷ್ಟಿಕೋನಗಳಿಂದಲೇ ಆದಂತವು.

ಹಿಂದಿನ ಕಾಲದಲ್ಲಿ ಊರಿಗೆ ಬೇಕಾದ ರಸ್ತೆ, ಕೆರೆ, ಬಾವಿ ಮುಂತಾದ ಊರಿನ ಪ್ರಾಥಮಿಕ ಅಗತ್ಯಗಳು ಏನಿವೆಯೋ ಅವುಗಳನ್ನು ಊರವರು ಒಟ್ಟು ಸೇರಿ ಸ್ವತಃ ತಾವೇ ನಿರ್ಮಿಸಿಕೊಳ್ಳುತ್ತಿದ್ದರು. ಅವುಗಳ ರೂಪು ರೇಷೆಗಳು ಇಂತಹ ಸಭೆ ಸಮಾರಂಭಗಳಿಗೆ ಮುಖ್ಯವಾಗಿ ದೇವಸ್ಥಾನಗಳಲ್ಲಿ ರೂಪಿತವಾಗುತ್ತಿದ್ದವು. ಮನೋರಂಜನೆಗಳು ಜನರನ್ನು ಬಹು ಬೇಗನೆ ಆಕರ್ಷಿಸುತ್ತದೆ. ನಮ್ಮ ಊರಿನ ರಸ್ತೆಯೆಲ್ಲಾ ಹಾಳಾಗಿದೆ, ಇದನ್ನು ನಾವೆಲ್ಲ ಒಟ್ಟು ಸೇರಿ ದುರಸ್ತಿ ಮಾಡಬೇಕು. ಈ ಸಂಬಂಧವಾಗಿ ಒಂದು ಸಭೆಯನ್ನು ಕರೆಯಲಾಗಿದೆ. ತಾವುಗಳೆಲ್ಲರು ಭಾಗವಹಿಸಬೇಕೆಂದು ಆಹ್ವಾನಿಸಿದರೆ, ಆ ದಿನ ಯಾರಿಗೂ ಸಮಯವೇ ಇರುವುದಿಲ್ಲ. ಎಲ್ಲರಿಗೂ ಬಹು ತುರ್ತಾದ ಕೆಲಸಗಳಿರುತ್ತವೆ. ಆದರೆ ಆ ದಿನ ಒಂದು ಮದುವೆ, ಹಬ್ಬ ಅಥವಾ ಇನ್ನಾವುದೇ ಮನೋರಂಜನಾ ಕಾರ್ಯಕ್ರಮಗಳಿದ್ದರೆ ಎಂತಹ ಕೆಲಸ ಇದ್ದು ಸಹ ಬಿಟ್ಟು ಹೋಗುತ್ತಾರೆ. ಅಂದರೆ ಜನರನ್ನು ಸುಲಭವಾಗಿ ಒಗ್ಗೂಡಿಸುವಂತ ಸಾಧನ ಈ ಮನೋರಂಜನೆಗಳು. ಇದರ ಮೂಲಕವಾಗಿ ಜನಾಭಿವೃದ್ಧಿ, ಗ್ರಾಮಾಭಿವೃದ್ಧಿ ಕಾರ್ಯಗಳು ಹಿಂದಿನ ಕಾಲದಲ್ಲಿ ನಡೆಯುತ್ತಿದ್ದವು. ಹೀಗೆ ನಮ್ಮ ಹಿರಿಯರು ಹಲವಾರು ಸಭೆ ಸಮಾರಂಭಗಳನ್ನು ತಿಂಗಳಿಗೆ ಒಂದಾವರ್ತಿಯಾದರೂ ಏರ್ಪಡಿಸಿ ಅದನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದರು. ಆದರೆ ಇಂದು ಅವುಗಳು ತಮ್ಮ ಮೂಲ ಉದ್ದೇಶವನ್ನು ಕಳೆದುಕೊಂಡು ಬರಿ ಮನೋರಂಜನೆಗಳು, ಪ್ರಚಾರ ಮತ್ತು ಅನಾರೋಗ್ಯಕರವಾದ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿದೆ. ನಾವು ಸಭೆ ಸಮಾರಂಭಗಳಲ್ಲಿ ಮನೋರಂಜನೆ ಸ್ಪರ್ಧೆಗಳ ಜೊತೆಯಲ್ಲಿ ಸಮಾಜದ ಆಗು ಹೋಗುಗಳ ಚಿಂತನೆಯನ್ನು ತಿಂಗಳಿಗೆ ಒಂದಾವರ್ತಿಯಾದರೂ ಸಮಾಜಗಳಲ್ಲಿ ಚರ್ಚಿಸಿ, ಚಿಂತಿಸಿ, ಸಮಾಜ ಬಾಂಧವರಿಗೆ ಅವುಗಳನ್ನು ಹರಿಯ ಬಿಟ್ಟಾಗ ಜನಾಂಗದ ಸರ್ವರೂ ಇದರ ಉಪಯೋಗವನ್ನು ಪಡೆಯಬಹುದೆನ್ನುವುದು ನನ್ನ ಅಭಿಪ್ರಾಯವಾಗಿದೆ. ನೀವೇನೆನ್ನುತ್ತೀರಿ? ○

**ಪೂಜಾರಿರ ಎಂ. ಜಗದೀಶ್, ಬಿಳಿಗೇರಿ.**

[7ನೇ ಪುಟದಿಂದ]

ಆಪ್ತರಲ್ಲಿ ಚರ್ಚಿಸಿ ಮನ ಹಗುರ ಮಾಡಿಕೊಳ್ಳುವುದು, ಸಾಯಂಕಾಲ ತಂಗಾಳಿಗೆ ಮೈಯೊಡ್ಡಿ ವಿಶ್ರಾಮದ ನಡಿಗೆ, ಪ್ರಕೃತಿ ಸೌಂದರ್ಯದ ಸವಿಯನ್ನು ಆನಂದಿಸುವ ಮನೋಭಾವ ಬೆಳೆಸಿಕೊಳ್ಳಿ.

8) 50 ವರ್ಷ ಕಳೆದ ಮೇಲೆ ಆರೋಗ್ಯವಾಗಿದ್ದಲ್ಲೂ ಸಹ ಕನಿಷ್ಠ ವರ್ಷಕ್ಕೊಮ್ಮೆಯಾದರೂ ವೈದ್ಯರ ಬಳಿ ಪರೀಕ್ಷಿಸಿಕೊಳ್ಳುತ್ತಿರಿ. ○

[5ನೇ ಪುಟದಿಂದ]

ಬಂಧನದಲ್ಲಿರಿಸಲು ಅಸಾಧ್ಯವಾಗಿ, ಕಾಶಿಗೆ ಗಡಿಪಾರು ಮಾಡುವಂತೆ 1834 ರಲ್ಲಿ ತೀರ್ಮಾನಿಸಲಾಯಿತು.

ಆದರೆ ಜನರು ವೀರಪ್ಪನ ರಾಜಮನೆತನದ ಆಳ್ವಿಕೆಯನ್ನು ಪುನಃ ಸ್ಥಾಪಿಸುವಲ್ಲಿ ಉತ್ಸುಕರಾಗಿದ್ದರು. ಕೊಡಗಿನಲ್ಲಿ ಈ ರಾಜಮನೆತನದ ಆಳ್ವಿಕೆಯೇ ಮುಂದುವರಿಯಬೇಕೆಂಬ ಘೋಷಣೆ ಪ್ರಾರಂಭವಾಯಿತು. ಅಪರಂಪರ ಎನ್ನುವ ಸನ್ಯಾಸಿಯ ನೇತೃತ್ವದಲ್ಲಿ ಹುಲಿಕೊಂದ ನಂಜಯ್ಯನೂ ಸೇರಿದಂತೆ ಬ್ರಿಟಿಷರ ವಿರುದ್ಧ ಗುಂಪೊಂದು ರೊಚ್ಚಿಗೆದ್ದಿತು.

ಅಪರಂಪರ ಮತ್ತು ನಂಜಯ್ಯ ತಮ್ಮ ಕೆಲಸಕ್ಕೆ ತಳಹದಿಯಾಗಿ ಕೂಜುಗೋಡು ಮನೆತನವನ್ನು ಆರಿಸಿಕೊಂಡರು. ಆದರೆ 1835ರಲ್ಲಿ ಅಪರಂಪರ ಬಂಧಿಸಲ್ಪಟ್ಟ ನಂತರ ಈ ಗುಂಪಿನ ನೇತೃತ್ವ ವಹಿಸಿದ ಕಲ್ಯಾಣಪ್ಪ 1836ರಲ್ಲಿ ಬೈತೂರ್‌ನಲ್ಲಿ ಸೆರೆಹಿಡಿಯಲ್ಪಟ್ಟ.

ಕಲ್ಯಾಣಪ್ಪನಿಂದ ತೆರವಾದ ನಾಯಕತ್ವ ಪುಟ್ಟಬಸಪ್ಪನಿಂದ ನಿಭಾಯಿಸಲ್ಪಟ್ಟಿತು. ನಂಜಯ್ಯ ಮತ್ತು ಇತರರ ಬೆಂಬಲ ಈತನಿಗೆ ದೊರಕಿತು. ಇವರ ಎಲ್ಲಾ ಚಟುವಟಿಕೆಗಳು ಪೂಮಲೆ ಬೆಟ್ಟದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿತ್ತು. ಪ್ರಬಲವಾದ ಸಾರ್ವಜನಿಕರ ಬೆಂಬಲದೊಂದಿಗೆ ಅವರು ಮಂಗಳೂರು ಮತ್ತಿತರ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿದರು. 1837ರ ಮಾರ್ಚ್ 30 ರಂದು ಸುಳ್ಯದಿಂದ ಜಾಥ ಹೊರಟರು. 2,000 ಯೋಧರ ಗುಂಪು ಬೆಳ್ಳಾರೆಯಲ್ಲಿನ ಸರಕಾರಿ ಖಜಾನೆಗೆ ಮುತ್ತಿಗೆ ಹಾಕಿ ಸ್ವಾಧೀನಪಡಿಸಿಕೊಂಡಿತು.

ಅದೇ ದಿನ 200 ಜನ ಯೋಧರ ಗುಂಪೊಂದು ಕಾಸರಗೋಡಿನ ಕಡೆ ಹೊರಟಿತು. ಏಪ್ರಿಲ್ 2 ಮತ್ತು 3 ರಂದು ಕುಂಬ್ಳೆ ಮತ್ತು ಮಂಜೇಶ್ವರವನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಈ ಚಳವಳಿಯಲ್ಲಿ ಭಾಗವಹಿಸಿದ ನಾಯಕರನ್ನು ಆಯಾಯಾ ಪ್ರದೇಶಗಳ ತಹಶೀಲ್ದಾರರು ಮತ್ತು ಇತರ ಕಛೇರಿಯ ಅಧಿಕಾರಿಗಳಾಗಿ ನಿಯಮಿಸಲಾಯಿತು. ಅವರಿಂದ ವಿಧೇಯತೆಯ ಪತ್ರವನ್ನು ಬರೆಸಿಕೊಂಡು ಅವರಿಗೆ ವೇತನವನ್ನು ಪಾವತಿ ಮಾಡಲಾಯಿತು. 30-3-1837 ರಂದು 200 ಜನರ ಗುಂಪೊಂದು ಮಡಿಕೇರಿಗೆ ತೆರಳಿತು.

ಕಲೆಕ್ಟರ್ ಲೆವಿನ್, ಈ ಎಲ್ಲ ಬೆಳವಣಿಗೆಗಳನ್ನು ತಿಳಿದು ಮಾರ್ಚ್ 30ರ ರಾತ್ರಿ 161 ಸೈನಿಕರ ಜೊತೆ ಹೊರಟು ಪುತ್ತೂರನ್ನು ತಲುಪಿದ. 1200 ಯೋಧರಿಂದ ಸುತ್ತುವರಿದ ಮಂಗಳೂರು, ಬಂಟ್ವಾಳ ಮತ್ತು ಗುರುಪುರವನ್ನು ಏಪ್ರಿಲ್ 2ರ ರಾತ್ರಿ ಸ್ವಾಧೀನಪಡಿಸಿಕೊಂಡ.

ಸ್ವಾತಂತ್ರ್ಯ ಯೋಧರ ಗುಂಪಿಗೆ ಬಲವಾದ ಸಾರ್ವಜನಿಕರ ಬೆಂಬಲವಿರುವುದನ್ನು ತಿಳಿದ ಲೆವಿನ್ ಸರ್ಕಾರಿ ಖಜಾನೆಯನ್ನು ಗುಪ್ತವಾಗಿ ಸೈನ್ಯವಿರುವ ಪ್ರದೇಶಕ್ಕೆ ಸ್ಥಳಾಂತರಿಸಲು ವ್ಯವಸ್ಥೆ ಮಾಡಿದ. ಹೊನ್ನಾವರ, ಧಾರವಾಡ ಮತ್ತಿತರ ಸ್ಥಳಗಳಿಂದ ಸೈನ್ಯವನ್ನು ಕರೆಸಿಕೊಳ್ಳಲಾಯಿತು.

ಏಪ್ರಿಲ್ 4ರ ರಾತ್ರಿ ಮಂಗಳೂರಿನಲ್ಲಿ ನಡೆದ ಬ್ರಿಟೀಷರ ರಹಸ್ಯ ಸಭೆಯಲ್ಲಿ ಸೈನ್ಯ ಹಾಗೂ ಖಜಾನೆಯೊಂದಿಗೆ ಕಣ್ಣಾನೂರಿಗೆ ಪಲಾಯನ ಮಾಡುವಂತೆ ನಿರ್ಧರಿಸಲಾಯಿತು. ಈ ಸಮಯದಲ್ಲಿ ಪುಟ್ಟಬಸಪ್ಪನ ಅನುಯಾಯಿಗಳ ಒಂದು ಗುಂಪು ಕುಂಬ್ರ, ಪುತ್ತೂರು, ಮಾಣಿ ಮತ್ತು ನಂದಾವರ ಮಾರ್ಗವಾಗಿ ಮಂಗಳೂರು ಕಡೆ ಹೊರಟಿತು.

ನಂದಾವರದ ನಾಯಕನಾದ ಲಕ್ಷ್ಮಪ್ಪ ಬಂಗರಸನ ಸಹಾಯವನ್ನು ಪಡೆದು ಮಂಗಳೂರಿನ ಬಾವುಟಗುಡ್ಡವನ್ನು ತಲುಪಿ ಅಲ್ಲಿ ತಮ್ಮ ಬಾವುಟವನ್ನು ಆರೋಹಣಗೈದರು. ಮಂಗಳೂರು ನಗರವು ಸ್ವಾತಂತ್ರ ಹೋರಾಟಗಾರರ ಅಧೀನದಲ್ಲಿತ್ತು. ಬ್ರಿಟೀಷರು ಸೈನ್ಯವಿರುವ ಸ್ಥಳಗಳಲ್ಲಿ ಆಶ್ರಯ ಪಡೆದರು.

6-4-1837ರ ಮಧ್ಯಾಹ್ನದ ನಂತರ ಸರಕಾರ 60 ಸೈನಿಕರನ್ನು ಕರೆಸಿ, ಕೋವಿ ಹಾಗೂ ಮದ್ದುಗುಂಡುಗಳೊಡನೆ ಬ್ರಿಟಿಷ್ ಪ್ರಜೆಗಳನ್ನು ಸುರಕ್ಷಿತವಾಗಿ ಕಣ್ಣಾನೂರು ತಲುಪಿಸಲು ವ್ಯವಸ್ಥೆ ಮಾಡಿತು. ಏಪ್ರಿಲ್ 6 ಮತ್ತು 7 ರಂದು ಎರಡೂ ಬಣಗಳ ನಡುವೆ ಪ್ರಬಲ ಹೋರಾಟ ನಡೆಯಿತು. ಏಪ್ರಿಲ್ 10 ರಂದು ಹೋರಾಟ ಕೊನೆಯಾಯಿತು.

ಈ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರಕಾರವು ತನ್ನ ಪ್ರಸಂಸಾವಧಾನತೆಯಿಂದ 'ಒಡೆದು ಆಳುವ ನೀತಿ'ಯನ್ನು ತಂದು ಭಾರತೀಯರ ನಡುವೆ ಬಿರುಕನ್ನು ತಂದಿತು. ಚಳವಳಿಯ ಪ್ರಮುಖ ನಾಯಕರನ್ನು ಸೆರೆಹಿಡಿದರು. ನಾಲ್ಕು ಜನರನ್ನು ಬಹಿರಂಗವಾಗಿ ನೇಣಿಗೆ ಹಾಕಲಾಯಿತು. ಪಾಣೆ ಮಂಗಳೂರಿನಿಂದ ನಂದಾವರದವರೆಗೆ ಆಳ್ವಿಕೆ ನಡೆಸುತ್ತಿದ್ದ ಲಕ್ಷ್ಮಪ್ಪ ಬಂಗರಸರು ಮೇ 27 ರಂದು ಗಲ್ಲಿಗೇರಿಸಲ್ಪಟ್ಟ. ಜೂನ್ 11 ರಂದು ಪುಟ್ಟಬಸಪ್ಪನನ್ನು ಬಿರ್ಕನಕಟ್ಟೆಯಲ್ಲಿ ನೇಣು ಹಾಕಲಾಯಿತು. ಹೀಗೆ ಮೊದಲ ಸ್ವಾತಂತ್ರ್ಯ ಸಮರದ ವೀರಗಾದೆ ಕೊನೆಯಾಯಿತು.

ಅಮರಕ್ರಾಂತಿ ಉತ್ಸವ ಸಮಿತಿಯು ನಮ್ಮ ಜಿಲ್ಲೆಯ ಜನರ ಭಾವನೆಗಳನ್ನು ಕಲಕುವುದರ ಮೂಲಕ ಒಂದು ಕ್ರಾಂತಿಯನ್ನು ಉಂಟುಮಾಡುತ್ತಿದೆ. ಪ್ರತಿ ವರ್ಷ ಈ ಉತ್ಸವವನ್ನು ಮಾರ್ಚ್ 30 ಮತ್ತು ಏಪ್ರಿಲ್ ತಿಂಗಳ ಮಧ್ಯೆ ನಡೆಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಅಮರಕ್ರಾಂತಿ ಉತ್ಸವವನ್ನು ಮೊದಲ ಬಾರಿಗೆ ಸುಳ್ಯದಿಂದ ಮಂಗಳೂರಿಗೆ ಜಾಥಾ ಹೋಗುವುದರ ಮೂಲಕ ನಡೆಸಲಾಗುತ್ತದೆ. ಇದು 1837ರ ಸ್ವಾತಂತ್ರ್ಯ ಜಾಥಾವನ್ನು ನೆನಪಿಗೆ ತರುತ್ತದೆ. ಪುರುಷರು, ಸ್ತ್ರೀಯರು, ಮಕ್ಕಳು, ಯುವಕ–ಯುವತಿಯರು ಈ ಜಾಥಾದಲ್ಲಿ ಭಾಗವಹಿಸುವರು. ನಿ. ನಾ. ಸಂ.ರ ನಾಟಕ ಶಾಲೆಯಲ್ಲಿ ಪದವಿ ಪಡೆದ ಜೀವನ್‌ರಾಂ ಸುಳ್ಯ ಇವರ ನಿರ್ದೇಶನದ ಬೀದಿ ನಾಟಕಗಳನ್ನು ಪ್ರದರ್ಶಿಸಲಾಯಿತು. ಇದು ಟಿಪ್ಪುಸುಲ್ತಾನ, ಪುಟ್ಟಬಸಪ್ಪ ಮೊದಲಾದವರ ತ್ಯಾಗ ಮತ್ತು ಪರಾಕ್ರಮಗಳನ್ನು ಜನರಿಗೆ ಮನದಟ್ಟು ಮಾಡುತ್ತದೆ.

ಜಾಥಾ ಬೆಳ್ಳಾರೆ, ಕುಂಬ್ರ, ಪುತ್ತೂರು, ಮಾಣಿ, ನಂದಾವರ, ಜೋಡುಮಾರ್ಗದಿಂದ ಮಂಗಳೂರಿಗೆ ತಲುಪಿ ಅಲ್ಲಿನ ಸೈಂಟ್ ಅಲೋಷಿಯಸ್ ಕಾಲೇಜಿನ ವಠಾರದಲ್ಲಿ ಸಭೆ ಸೇರಲಾಯಿತು. ಬಿ.ಎ. ಮೊಯಿದಿನ್, ಮಾಜಿ ಮುಖ್ಯಮಂತ್ರಿ ಹಾಗೂ ಕಾರ್ಕಳ ಶಾಸಕ ವೀರಪ್ಪಮೊಯ್ಲಿ, ಬ್ಲೇಸಿಯಸ್ ಡಿಸೋಜಾ, ಸುರತ್ಕಲ್ ಶಾಸಕ ಕುಂಬ್ಳೆ ಸುಂದರರಾವ್, ಶಾಸಕ ಕೆ. ಅಭಯಚಂದ್ರ ಹಾಗೂ ಸ್ವಾತಂತ್ರ ಹೋರಾಟಗಾರ ಡಾ|| ಸಂಜೀವನಾಥ ಐಕಳ ಮತ್ತು ಅಮ್ಮೆಂಬಳ ಬಾಳಪ್ಪ ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಮರಕ್ರಾಂತಿಯ ಇತಿಹಾಸದ ಕುರಿತು ಸಂಶೋಧನೆ ನಡೆಸಲು ಅವಕಾಶ ಕಲ್ಪಿಸುವುದಾಗಿ ಭರವಸೆ ನೀಡಲಾಯಿತು.

ಸೈಂಟ್ ಅಲೋಷಿಯಸ್ ಕಾಲೇಜಿನ ವಠಾರದಲ್ಲಿ ಬಾವುಟವನ್ನು ಹಾರಿಸಲಾಯಿತು. ಏಪ್ರಿಲ್ ಐದು 1998ರಂದು ಉತ್ಸವ ಸಮಿತಿಯ ಅಧ್ಯಕ್ಷರಾದ ಎಸ್. ಎಸ್. ದೇವಿಪ್ರಸಾದ್ ರವರು ಧ್ವಜಾರೋಹಣಗೈಯುವ ಮೂಲಕ ಈ ಉತ್ಸವಕ್ಕೆ ಶುಭಾರಂಭವನ್ನು ಮಾಡಲಾಯಿತು.

ಇತಿಹಾಸವನ್ನು ಮತ್ತೊಮ್ಮೆ ಬರೆಯಬೇಕು. ನಮ್ಮ ನಾಡಿನ ಸ್ವಾತಂತ್ರ್ಯ ಯೋಧರನ್ನು ದಂಗೆಕೋರರು, ಡಕಾಯಿತರೆಂಬುದಾಗಿ ನೀಡಿದ ತಪ್ಪು ವಿವರಣೆಯನ್ನು ಸರಿಪಡಿಸಬೇಕು. ನ್ಯಾಯ ವಿಳಂಬವಾಗಿಯಾದರೂ ದೊರೆಯಲೇಬೇಕು. ಇದು ಇಂದು ಇರುವಂತಹ ಸಮಸ್ಯೆ ಮುಂದೆಂದೂ ಇಲ್ಲದಂತಾಗಬೇಕು.

[ಮೇಲಿನ ಲೇಖನ 1998ರ ಮೇ ತಿಂಗಳ "ಮ್ಯಾಂಗ್ಲೂರ್ ಟುಡೆ" ಇಂಗ್ಲಿಷ್ ಮಾಸ ಪತ್ರಿಕೆಯಲ್ಲಿ ಪ್ರಕಟವಾಗಿದೆ. 1999 ರಲ್ಲಿ ಸರಕಾರದ ಸಹಕಾರದೊಂದಿಗೆ "ಅಮರಕ್ರಾಂತಿ ಉತ್ಸವ" ನಡೆಸಲಾಗುವುದೆಂದು ತಿಳಿದುಬಂದಿದೆ.] —ಸಂಪಾದಕ

ಸಂಗ್ರಹ : ಕೆ. ಕೆ. ವೆಂಕಪ್ಪ, ಕೊಡಗು.

## ನೆ ನ ಪು

ಬಾ ಕಣ್ಣೀರೆ ಬಾ ಕೊಚ್ಚಿಕೊಂಡು ಹೋಗು
ನನ್ನೆದೆಯ ಕಲ್ಮಶಗಳ
ಹಾಗೇ ಈ ಮನ ತುಂಬಿ ಹಿಂಸಿಸುವ ಬೇಗುದಿಗಳ
ಕಣ್ಣೀರಿಗೂ ಪ್ರೀತಿಗೂ ಎಷ್ಟೊಂದು ಹೋಲಿಕೆ
ಎರಡರಲ್ಲೂ ಸಮಾನ ಕಾತರವಿದೆ ಮಿಲನಕೆ
ತೊಯ್ದು ಹೋಯಿತು ಮೈ–ಮನ ಪೂರ್ತಿ

ಕಣ್ಣೀರು ಸುರಿಸಿ ನಿನ್ನ ನೆನಪಿನಿಂದ
ಕಣ್ಣೀರ ಮಹಾ ಕಾವ್ಯಕ್ಕೆ ಮುಗಿಲು ಮುನ್ನುಡಿ ಬರೆಯಿತು
ಆಕಾಶ, ಇಳೆ ನಡುವೆ ಮಳೆ ಸುರಿಯಿತು
ಗುಡುಗಿಲ್ಲ, ಸಿಡಿಲಿಲ್ಲ, ಆದರೂ ಅದೇಕೋ ಚಕಪಕ ಮಿಂಚು
ಎದುರಿಲ್ಲ, ಭೇಟಿಯಿಲ್ಲ ಆದರೂ ಅದೇಕೋ
ಮತ್ತೆ ಮತ್ತೆ ನಿನ್ನ ನೆನಪು ?

—ಕುದುಕುಳಿ ಲೇಖ ರವಿಕುಮಾರ್

## ನಗೆ ಹನಿ

ಹೆಂಡತಿ : ನಿಮ್ಮನ್ನು ಕಟ್ಟಿಕೊಳ್ಳುವುದಕ್ಕೆ ನಾನು ಕರ್ಮ ಮಾಡಿರಬೇಕು, ನಾನಾಗಿರುವುದಕ್ಕೆ ಕಟ್ಟಿಕೊಂಡಿದ್ದೇನೆ.

ಗಂಡ : ಹೌದು ಹೌದು ಸುಮ್ಮನಿರೆ ಕಂಡಿದ್ದಿನಿ, ನಾನು ನಿನ್ನನ್ನು ಮದುವೆ ಆಗದಿದ್ದರೆ ನಿನ್ನನ್ನು ಯಾರೂ ಮದುವೆ ಆಗುತ್ತಿರಲಿಲ್ಲ.

ಹೆಂಡತಿ : ನನ್ನನ್ನು ಮದುವೆಯಾಗಲು ಒಂದು ದೊಡ್ಡ ಕ್ಯೂ ನಿಂತಿತ್ತು.

ಗಂಡ : ಹೌದು ನಿಂತಿತ್ತು ಕತ್ತೆಗಳ ಸಾಲು. ಆ ಕತ್ತೆಗಳಲ್ಲಿ ಒಂದನ್ನು ಮದುವೆಯಾಗಬೇಕಿತ್ತು.

ಹೆಂಡತಿ : ಹೌದು, ನಾನು ಆ ಸಾಲಿನಲ್ಲಿ ನಿಂತಿದ್ದ ಮೊದಲ ಕತ್ತೆಯನ್ನು ಮದುವೆ ಆಗಿ ಈ ಕಷ್ಟ ಅನುಭವಿಸುತ್ತಿದ್ದೇನೆ.

ಪಾಣತ್ತಲೆ ಎಸ್. ಲಕ್ಷ್ಮಿ —ಬೆಂಗಳೂರು.

# ಗೌಡರ ಪದ್ಧತಿಗಳು

**ಋತು ಶಾಂತಿ :**

ಹೆಣ್ಣು ಮಕ್ಕಳು ಸಾಧಾರಣವಾಗಿ ಹದಿಮೂರರಿಂದ ಹದಿನೆಂಟು ವರ್ಷದೊಳಗೆ ರಜಸ್ವಲೆಯಾಗುವರು. ಪ್ರಥಮತಃ ರಜಸ್ವಲೆಯಾದ ಹೆಣ್ಣು ಮಕ್ಕಳು ಆ ದಿನ ಯಾವುದಾದರೊಂದು ಫಲದ ಮರದಡಿಯಲ್ಲಿ ಹೋಗಿ ಕುಳಿತುಕೊಳ್ಳುವುದು ವಾಡಿಕೆ.

ರಜಸ್ವಲೆಯಾಗಿರುವಳೆಂದು ತಿಳಿದ ಹೆಣ್ಣು ಮಗಳನ್ನು ಮನೆಯ ಅಂಗಳಕ್ಕೆ ಕರೆ ತಂದು ಮನೆಯ, ನೆರೆಯ ಮುತ್ತೈದೆ ಹೆಂಗಸರೆಲ್ಲ ಋತುವಾದ ಹುಡುಗಿಯನ್ನು ಪೂರ್ವಾಭಿಮುಖವಾಗಿ ಒಂದು ಮಣೆಯಲ್ಲಿ ಕುಳ್ಳಿರಿಸುತ್ತಾರೆ. ನಂತರ ಐದು ಚೆಂಬುಗಳಲ್ಲಿ ನೀರು, ಮಾವಿನ ಎಲೆ ಮತ್ತು ಎಣ್ಣೆ ಗರಿಕೆ ಹುಲ್ಲು ಇಡಬೇಕು. ನಂತರ ಮುತ್ತೈದೆಯರು, ಅತ್ತಿಗೆ ನಾದಿನಿಯರು ಎಣ್ಣೆ ಚರಕಿನಿಂದ ಎಣ್ಣೆಯನ್ನು ಗರಿಕೆಯಿಂದ ತೆಗೆದುಕೊಂಡು ತಲೆಗೂ ಕಾಲಿಗೂ ಹಚ್ಚಿ ಶಾಸ್ತ್ರ ಮಾಡುತ್ತಾರೆ. ಒಂದು ತಂಬಿಗೆಯಿಂದ ನೀರನ್ನು ಅವಳ ತಲೆಯ ಮೇಲಿಂದ ಹುಯ್ಯುತ್ತಾರೆ. ಅದೇ ರೀತಿ 5 ಯಾ 7 ಹೆಂಗಸರು ನೀರು ಹಾಕಿದ ನಂತರ ಅವಳಿಗೆ ಬೇರೆ ಮಡಿ ಬಟ್ಟೆ ಉಡಲು ಕೊಡುತ್ತಾರೆ. ಮತ್ತು ಅವಳನ್ನು ಹೊರಮನೆಯಲ್ಲಿ ಯಾ ಕೊಟ್ಟಿಗೆಯಲ್ಲಿ ಕೂರಿಸುತ್ತಾರೆ. ರಜಸ್ವಲೆಯಾದ ಮೂರನೆ ದಿವಸ ಮಡಿವಾಳಗಿತ್ತಿಯನ್ನು ಕರೆಸಿ ಶಾಸ್ತ್ರೋಕ್ತವಾಗಿ ಕೆಲವು ಕಾರ್ಯಕ್ರಮಗಳನ್ನು ಜರುಗಿಸುವರು. ನಂತರ ಪುಣ್ಯಾರ್ಚನೆ ಮತ್ತು ಚೌಳು ನೀರಿನಿಂದ ಮನೆಯನ್ನು ಶುದ್ಧ ಮಾಡಿ ಹುಡುಗಿಯನ್ನು ಸ್ನಾನ ಮಾಡಿಸುವರು. ನಂತರ ಮಣ್ಣಿನ ಮಡಿಕೆಯಲ್ಲಿ ನೀರು ತುಂಬಿ ಅದರ ಒಳಗೆ ಒಂದು ಸೆಡೆ[ಸೌಟು] ಹಾಕಿ ಹುಡುಗಿಯ ತಲೆಯ ಮೇಲೆ ಹೊರಿಸಿಕೊಂಡು ಮನೆ ಹತ್ತಿಸಿ ಬಂದು ನೆಲ್ಲಕ್ಕಿಯಡಿಯಲ್ಲಿ ಇರಿಸುವರು. ಈ ಕ್ರಮಕ್ಕೆ "ಮಡಿಕೆ ಹಿಡಿಸುವುದು" ಎನ್ನುವರು. ಮೂರನೆಯ ದಿನ ಮಡಿಕೆ ಹಿಡಿಸುವ ಕ್ರಮ ಮಾಡದಿದ್ದರೆ ಹನ್ನೆರಡನೆಯ ದಿನ ಆ ಕ್ರಮವನ್ನು ಮಾಡುತ್ತಾರೆ. ಅಲ್ಲಿಯ ತನಕ ಹುಡುಗಿಯ ಕೈಯಲ್ಲಿ ಯಾವ ಕೆಲಸವನ್ನು ಮಾಡಿಸುವುದಿಲ್ಲ. ಮೇಲಾಗಿ ಅಡಿಗೆ ಮಾಡಬಾರದು.

ಋತುವಾದ ಹದಿನಾರನೆಯ ದಿವಸ ಋತುಶಾಂತಿ ಲಗ್ನವನ್ನು ಆಚರಿಸುವರು. ಆಗ ನೆರಮನೆಯವರನ್ನು, ಊರಿನವರನ್ನು, ನೆಂಟರಿಷ್ಟರನ್ನು ಆಹ್ವಾನಿಸಿಕೊಳ್ಳುವರು. ಋತುಶಾಂತಿ ವಿವಾಹದ ದಿನ ಹುಡುಗಿಯನ್ನು ಸ್ನಾನ ಮಾಡಿಸಿ ಹೊಸ ಸೀರೆ ರವಿಕೆಗಳನ್ನು ತೊಡಸಿ ಆಭರಣಗಳಿಂದ ಶೃಂಗರಿಸಿ ನೆಲ್ಲಕ್ಕಿಯಡಿಯಲ್ಲಿ ಅಥವಾ ಐನ್ ಮನೆಯ ಕಯ್ಯಾಲೆಯಲ್ಲಿ ಕುಳ್ಳಿರಿಸುತ್ತಾರೆ. ಹುಡುಗಿಯ ತಂದೆ ತಾಯಿಯರು ಮತ್ತು ನೆರೆದವರೆಲ್ಲರೂ ಅಕ್ಷತೆ [ಅಕ್ಕಿಹಾಳು] ಹಾಕಿ ಆಶೀರ್ವದಿಸುವರು ಮತ್ತು ಉಡುಗೊರೆಗಳನ್ನು ಕೊಡುವರು. ಅನಂತರ ಸೇರಿದವರೆಲ್ಲರಿಗೂ ಭೋಜನವನ್ನೀಯುವರು.

ಕುಟುಂಬದಲ್ಲಿ ಋತುಮತಿಯಾದ ಹೆಣ್ಣಿನ ಹೊಲೆ ತೊಲಗಿಸದೆ ಹೋದರೆ ಆ ಕುಟುಂಬದಲ್ಲಿ ನಡೆಯುವ ಹಂಸೇವೆಗೆ ಗೊನೆ ಕಡಿಯಬಾರದು ಎಂಬ ನಿಯಮವಿದೆ ಮತ್ತು ಅವಳದೆ ಮದುವೆಗೆ ಚಪ್ಪರದ ಕಂಬವನ್ನು ನೆಡಬಾರದು ಎಂಬ ನಿಯಮ ಸಹ ಇದೆ.

ಕೃಪೆ : ಗೌಡ ಸಂಸ್ಕೃತಿ

## ಶತಾಯುಷಿ ನಿಧನ

ದಿನಾಂಕ 31-1-99ರಂದು ಅಮ್ಮಂದೂರು ಗ್ರಾಮದ ಕಡ್ಯದ ಮನೆ ದಿವಂಗತ ಅಯ್ಯಣ್ಣನವರ ಪತ್ನಿ ಚಿಣ್ಣಮ್ಮನವರು ವೈಕುಂಠವಾಸಿಯಾದರು. ಇವರಿಗೆ 104 ವರ್ಷ ಆಗಿತ್ತಲ್ಲದೆ ಸದ್ಯಕ್ಕೆ ಅರೆಭಾಷಿಕರ ಶತಾಯುಷಿಯೆನ್ನಬಹುದು.

## ನಿಧನ

ದಿನಾಂಕ 20-1-1999ರ ಬುಧವಾರ ಕಟ್ಟೆಮಾಡು ಗ್ರಾಮದ ಅಪ್ಪೆಯಂಡ್ರ ಆನಂದನವರು ವೈಕುಂಠವಾಸಿಯಾದರೆಂದು ತಿಳಿದು ಬಂದಿದೆ.

## ವಿ.ವಿ. ಕ್ರೀಡಾ ತಂಡಕ್ಕೆ ಆಯ್ಕೆ

ಜನವರಿ 21 ಹಾಗೂ 22 ರಂದು ತಮಿಳುನಾಡಿನ ಅಣ್ಣಾಮಲೈ ನಗರದಲ್ಲಿ ನಡೆದ ಅಖಿಲ ಭಾರತ ಅಂತರ ವಿಶ್ವ ವಿದ್ಯಾನಿಲಯ ಮಟ್ಟದ ಬಾಲ್‌ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಮಂಗಳೂರು ವಿ. ವಿ. ತಂಡದ ನಾಯಕಿಯಾಗಿ ಸುಳ್ಯದ ನೆಹರು ಸ್ಮಾರಕ ಮಹಾವಿದ್ಯಾಲಯದ ದ್ವಿತೀಯ ವಿಜ್ಞಾನ ಪದವಿ ತರಗತಿ ವಿದ್ಯಾರ್ಥಿನಿ ಎಂ.ಆರ್. ವಿದ್ಯಾ ಅವರು ಆಯ್ಕೆಗೊಂಡಿದ್ದರು. ಈಕೆ ಸುಳ್ಯದ ಮೊಂಟಡ್ಕ ರಾಮಚಂದ್ರಗೌಡರ ಪುತ್ರಿಯಾಗಿದ್ದಾಳೆ.

# ಕೊಡಗು ಗೌಡ ಸಮಾಜದ ಮಹಾಸಭೆ ಮತ್ತು ಅಭಿನಂದನಾ ಸಮಾರಂಭ

**ದಶವರುಷಗಳ ನಂತರ ಕೊನೆಗೂ ನಡೆದ ಸಾಮಾನ್ಯ ಸಭೆ, ಕೊಡಗು ಗೌಡ ಸಮಾಜ ಮಡಿಕೇರಿ ಇದರ ಕಾರ್ಯವೈಖರಿ, 21 ನೇ ಶತಮಾನಕ್ಕೆ ಒಗ್ಗೂಡಿ ಕೊಂಡೊಯ್ಯಲು ಯುವಕರಿಗೆ ಕರೆ, ಸಿದ್ದಾಪುರದ ಶ್ರೀ ತೋಟಂಬೈಲು ಮಾದಪ್ಪ ನಾಣಯ್ಯ ಮರು ಆಯ್ಕೆ, ಕೊಡಗು ಗೌಡ ಸಮಾಜದ ಸದಸ್ಯತನ ರೂ. 250ಕ್ಕೆ ಏರಿಕೆ, ಅತೀ ಹೆಚ್ಚು ಸದಸ್ಯರನ್ನು ನೋಂದಾಯಿಸಲು ನಿರ್ದೇಶಕರ ತೀರ್ಮಾನ. ಹತ್ತು ಕುಟುಂಬ ಹದಿನೆಂಟು ಗೋತ್ರದವರ ಸಹಕಾರ ನಿರೀಕ್ಷೆ.**

ದಿನಾಂಕ 24-1-99ರಲ್ಲಿ ಗೌಡ ಸಮಾಜ ಮಡಿಕೇರಿ ಇದರ ವಾರ್ಷಿಕ ಮಹಾಸಭೆಯು ನಡೆಯಿತು. ಹತ್ತು ವರ್ಷಗಳ ನಂತರ ಈ ಮಹಾಸಭೆ ನಡೆಸಿ ಇತಿಹಾಸ ನಿರ್ಮಿಸಿರುವುದು ಗೌಡ ಸಮಾಜದ ಮೈಲುಗಳಲ್ಲೊಂದು. ನೂತನ ಸಾಲಿನ ಅಧ್ಯಕ್ಷರಾಗಿ ಸಿದ್ಧಾಪುರದ ಜನಾಂಗದ ಆಗರ್ಭ ಶ್ರೀಮಂತ, ಕಾಫೀ ಪ್ಲಾಂಟರ್ ಮತ್ತು ದಾನಿಗಳು ಆದ ಶ್ರೀ ತೋಟಂಬೈಲು ನಾಣಯ್ಯ ಅವರ ಅವಿರೋಧ ಆಯ್ಕೆ, ಸುಮಾರು 200 ಮಂದಿಯಷ್ಟು ಸೇರಿದ ಈ ಸಭೆಯಲ್ಲಿ ಸಾಕಷ್ಟು ಪರ ಮತ್ತು ವಿರೋಧ ಚರ್ಚೆಗಳು ನಡೆಯಲ್ಪಟ್ಟವು. 10 ವರ್ಷಗಳಿಂದ ಸಾಮಾನ್ಯ ಸಭೆ ಕರೆಯಲಾಗದೆ, ಇವರ ಸವಿವರವಾದ ಮಾಹಿತಿಯನ್ನು ಆಡಳಿತ ಮಂಡಳಿಯು ಸ್ಥೂಲವಾಗಿ ಸದಸ್ಯರಿಗೆ ವಿವರಿಸಿತು. ಎಲ್ಲವನ್ನೂ ಸೂಕ್ಷ್ಮವಾಗಿ ಆಲಿಸಿದ ಸಭೆಯು ಅಂತಿಮವಾಗಿ ಈ ಕೆಳಗಿನ ಪದಾಧಿಕಾರಿ, ನಿರ್ದೇಶಕರುಗಳನ್ನು ಮುಂದಿನ ಸಾಲಿಗೆ ಆರಿಸಲಾಯಿತು. ಅಧ್ಯಕ್ಷರಾಗಿ ಶ್ರೀ ತೋಟಂಬೈಲು ನಾಣಯ್ಯನವರನ್ನು, ಉಪಾಧ್ಯಕ್ಷರಾಗಿ ಶ್ರೀ ಕೋರನ ಪೂಣಚ್ಚನವರನ್ನು, ಕಾರ್ಯದರ್ಶಿಯಾಗಿ ಪೈಕೇರ ಅನಂತರಾಮ್‌ರವರನ್ನು, ಖಜಾಂಚಿಯಾಗಿ ಕರ್ಣಯ್ಯನ ವಿಶ್ವನಾಥರವರನ್ನು, ನಿರ್ದೇಶಕರನ್ನಾಗಿ ಮಂದ್ರೀರ ನಾಣಯ್ಯ, ಹುದೇರಿ ನಾಗೇಶ್, ಪೇರಿಯನ ಜಯನಂದ, ದಂಬೆಕೋಡಿ ಪೂವಯ್ಯ, ಪಟ್ಟಮನೆ ಶೇಷಪ್ಪ, ಪಂಜಿಪಳ್ಳ ವೆಂಕಪ್ಪ, ಕೂಡಕಂಡಿ ಕಾವೇರಮ್ಮ, ಕೋರನ ವಿಶ್ವನಾಥ ಇವರುಗಳನ್ನು ಆರಿಸಲಾಯಿತು.

ವಿಶೇಷ ಆಹ್ವಾನಿತರನ್ನಾಗಿ ಮಡಿಕೇರಿ ತಾಲೋಕಿನ ಹಾಲಿ ಶಾಸಕರಾದ ದಂಬೆಕೋಡಿ ಮಾದಪ್ಪನವರನ್ನು ಕೊಡಗು ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಊರುಬೈಲು ಜಯಪ್ರಕಾಶ್‌ರವರನ್ನು ಹಾಗೂ ತಾಲೂಕು ಪಂಚಾಯತಿ ಉಪಾಧ್ಯಕ್ಷರಾದ ಶ್ರೀಮತಿ ತೋಟಂಬೈಲು ಪ್ರೇಮ ಆನಂದರವರನ್ನು ಆರಿಸಲಾಯಿತು. ಅಂತೆಯೇ ಖಾಯಂ ಆಹ್ವಾನಿತರನ್ನಾಗಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾದ ತುಂತಜೆ ಗಣೇಶ್‌ರವರನ್ನು, ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷಣಿಯಾದ ಶ್ರೀಮತಿ ಚಿಯಂಡೀರ ರಾಧ ಯಾದವರನ್ನು ಮತ್ತು ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷರಾದ ಕುಯ್ಯಮುಡಿ ಪೂರ್ಣಯ್ಯನವರನ್ನು ಆರಿಸಲಾಯಿತು.

ಅಂದಿನ ಸಮಾರಂಭದಲ್ಲಿ ಗೌಡ ಸಮಾಜದ ವತಿಯಿಂದ ಜನಾಂಗದ ವಿವಿಧ ಕ್ಷೇತ್ರಗಳಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ ಹಾಗೂ ಸಲ್ಲಿಸುತ್ತಿರುವ ಹಿರಿ ಕಿರಿಯರನ್ನು ಪರಿಚಯಿಸಿ ಸನ್ಮಾನಿಸಲಾಯಿತು. ಇವರುಗಳೆಂದರೆ ಶ್ರೀಮತಿ ಕೆದಂಬಾಡಿ, ಎಸ್. ಇಂದಿರಾ, ನಿವೃತ್ತ ನಿರ್ದೇಶಕರು ಶಿಕ್ಷಣ ಇಲಾಖೆ, ಕೆದಂಬಾಡಿ ಎಸ್. ಆನಂದ, ನಿವೃತ್ತ ಮುಖ್ಯ ಅಭಿಯಂತರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕುದುಪಜೆ ಭೈರಪ್ಪ ನಿವೃತ್ತ ಡಿವೈ. ಎಸ್. ಪಿ. [K.S.R.P.] ಡಾ|| ಚೆಟ್ಟಿಮಾಡ ಆನಂದ ನಿವೃತ್ತಿ ಪ್ರಾಚಾರ್ಯ, ಊರುಬೈಲು ಜಯಪ್ರಕಾಶ್ ಅಧ್ಯಕ್ಷರು ಜಿಲ್ಲಾ ಪಂಚಾಯತ್ ಕೊಡಗು, ಬಡ್ಡನ ಸಿದ್ಧಾರ್ಥ ಕೆ. ಎ. ಎಸ್. ಉಪಕಾರ್ಯದರ್ಶಿ ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಕರ್ನಾಟಕ, ಕೊರಿಯಾರ್ ರವಿಕುಮಾರ್, ಭಾರತ್ ಶ್ರೀ ಮತ್ತು ಭಾರತ್ ಗೌರವ್ ಇವರುಗಳು.

ಸನ್ಮಾನಿತರ ಪೈಕಿ ಶ್ರೀಯುತ ಕೊಂಪುಳಿ ಸೋಮಪ್ಪ ನಿವೃತ್ತ ಡಿ.ವೈ.ಎಸ್.ಪಿ. ಹಾಗೂ ಉಪಾಧ್ಯಕ್ಷರು ಕುಶಾಲನಗರ ಗೌಡ ಸಮಾಜ, ಏಕಲವ್ಯ ಪ್ರಶಸ್ತಿ ವಿಜೇತ ನಿಡುಬೆ ಮೋಹನ್‌ಕುಮಾರ್, ಅಂತರಾಷ್ಟ್ರೀಯ ಮೂಕಾಭಿನಯ ಪಟು ಚೈತಡ್ಕ ಶಶಿಧರ್ ಇವರುಗಳು ಅಂದು ಗೈರುಹಾಜರಿದ್ದರು.

ಅಂದಿನ ಅಭಿನಂದನಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ತೋಟಂಬೈಲು ನಾಣಯ್ಯ ಅಧ್ಯಕ್ಷರು ಕೊಡಗು ಗೌಡ ಸಮಾಜ ಮಡಿಕೇರಿ ಇವರು ವಹಿಸಿದ್ದರು. ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಕರ್ನಾಟಕ ಸರ್ಕಾರದ ಮಾಜಿ ಸಚಿವರುಗಳಾದ ಶ್ರೀ ದಂಬೆಕೋಡಿ ಚಿಣ್ಣಪ್ಪನವರು ಮತ್ತು ಜೀವಿಜಯರವರು ಹಾಗೂ ಸ್ಥಳೀಯ ಹಾಲಿ ಶಾಸಕ ಶ್ರೀ ದಂಬೆಕೋಡಿ ಮಾದಪ್ಪನವರು ಆಗಮಿಸಿದ್ದರು.

ಮಾಜಿ ಸಚಿವ ಡಿ. ಎ. ಚಿಣ್ಣಪ್ಪನವರು 1956 ರಲ್ಲಿ ಕೊಡಗು ಕರ್ನಾಟಕದೊಂದಿಗೆ ಏಕೀಕರಣ ಆಗದಿದ್ದರೆ ಗೌಡ

ಸಮುದಾಯ ಇಷ್ಟೊಂದು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು. 1952ರ ಕೊಡಗು ಶಾಸಕಾಂಗದಲ್ಲಿ ಚೆಪ್ಪುಡಿರ ಪೂಣಚ್ಚನವರು ತೆಗೆದ ದೃಢ ನಿರ್ಧಾರದ ಪ್ರತೀಕವೇ ಈ ಸಮಾರಂಭ. ಕೊಡಗಿನಲ್ಲಿ ಗೌಡರು ಇದ್ದಾರೆ ಎನ್ನುವ ಅಂಶ ಈಗ ನಮ್ಮ ಪತ್ರಿಕೆಯ ಮೂಲಕ ಕರ್ನಾಟಕಕ್ಕೆ ಗೊತ್ತಾಗಿದೆ. ನಮ್ಮ ಭಾಂದವರು ಅಧಿಕಾರದಲ್ಲಿರುವಾಗಲೇ ಸನ್ಮಾನವಾಗಬೇಕು. ಅನಂತರ ಗೌಡ ಸಾಂಸ್ಕೃತಿಕ ಅಕಾಡೆಮಿ ಮತ್ತು ಮಹಿಳಾ ಒಕ್ಕೂಟವು ಮರೆತ ಕಲೆ, ಸಂಸ್ಕೃತಿ, ಸಾಹಿತ್ಯ ಸೇವೆ ಮಾಡುತ್ತ ಜೊತೆಜೊತೆಯಾಗಿ ಹೋಗುತ್ತಿದೆ. ಈ ನಿಟ್ಟಿನಲ್ಲಿ ಜನಾಂಗದ ಪತ್ರಿಕೆಯು ಸಹ ಸಹಕರಿಸುತ್ತಿದೆ ಎಂದರು.

ಸನ್ಮಾನಿತರ ಪರವಾಗಿ ಮಾತನಾಡಿದ ಜಿಲ್ಲಾ ಪಂಚಾಯತ್ ಅಧ್ಯಕ್ಷ ಊರುಬೈಲು ಪಿ. ಜಯಪ್ರಕಾಶ್ ಅವರು ಸನ್ಮಾನ ಪಡೆಯುವವರು ಸಮಾಜಕ್ಕೆ ಏನನ್ನಾದರು ಕೊಡುಗೆಯಾಗಿ ನೀಡಬೇಕು. ಯುವಕರನ್ನು ಹೆಚ್ಚಾಗಿ ಸನ್ಮಾನಿಸಬೇಕೆಂದರು.

ಹಾಲಿ ಶಾಸಕ ದಂಬೆಕೋಡಿ ಮಾದಪ್ಪ ಮಾತನಾಡಿ ಕೊಡಗು ಪ್ರತ್ಯೇಕತೆಯನ್ನು ಬಹಳ ಹಿಂದೆಯೇ ವಿರೋಧಿಸಿದವರೆಂದರೆ ಗೌಡ ಜನಾಂಗವೇ ಆಗಿದೆ. ಮಹಾನ್ ಸರ್ದಾರ್ ಪಟೇಲರು ಹರಿದು ಹಂಚಿಹೋದ ಭಾರತವನ್ನು ಒಗ್ಗೂಡಿಸಿದರೆ ಇಲ್ಲಿ ಈಗ ಪುನಃ ಪ್ರತ್ಯೇಕತೆಯ ಕೂಗು ಕೇಳಿಬರುತ್ತಿದೆ ಎಂದರಲ್ಲದೆ ಈಗ ಜಿಲ್ಲೆಯಲ್ಲಿ ಶಾಂತಿ ಕದಡಿದೆ, ಅಸಮಾಧಾನ ಮೂಡಿದೆ. ಹಾಗಾಗಿ ಜನರು ವಿಶಾಲ ಮನೋಭಾವದವರಾಗಲೇ ಬೇಕಾಗಿದೆ. ಕೊಡಗಿನ ಹಿತ ಎಲ್ಲಾ ಜನಾಂಗಕ್ಕೂ ಮುಖ್ಯವಾಗಿದೆ. ಅದಕ್ಕೆ ಪ್ರಾಮುಖ್ಯತೆ ಕೊಡಬೇಕಿದೆ. ಪ್ರಭಾವಕ್ಕೆ ಹೆಚ್ಚಿನ ಮಹತ್ವ ಸಿಗುತ್ತಿದೆ. ಎಲ್ಲಾ ಜನಾಂಗವು ಸಂಘಟಿತವಾಗುತ್ತಿದೆ. ಕೊಡಗಿನ ಗೌಡ ಜನಾಂಗ ಒಕ್ಕಲಿಗರೆಂಬುದನ್ನು ತಿಳಿದುಕೊಂಡು ಹೆಚ್ಚಿನ ಪ್ರಮಾಣದಲ್ಲಿ ಸಂಘಟಿತರಾಗಬೇಕಿದೆ. ಪರಂಪರೆ, ಸಂಸ್ಕೃತಿಯನ್ನು ಗೌಡ ಜನಾಂಗ ಪ್ರತಿಬಿಂಬಿಸಬೇಕು. ಸಮಾಜದಲ್ಲಿ ಅತೀ ಹೆಚ್ಚಿನ ಸಾಧನೆ ಮಾಡಿದ ಹಿರಿಯರನ್ನು ಗುರುತಿಸಿ ಸನ್ಮಾನಿಸುವಂತೆ ಯುವಕರನ್ನು ಗುರುತಿಸಬೇಕಿದೆ. ಕಷ್ಟದಲ್ಲಿರುವ ಕುಲಭಾಂದವರನ್ನು ಮೇಲಕ್ಕೆತ್ತಲು ಉಳಿದವರು ಯತ್ನಿಸಬೇಕೆಂದರು.

ಜೀವಿಜಯರವರು ಮಾತನಾಡಿ ಬದುಕಿನಲ್ಲಿ, ಬಾಳಿನಲ್ಲಿ ಜನಾಂಗಕ್ಕೆ ಸೀಮಿತವಾಗಿ ಕೆಲಸ ಮಾಡಿದವರಿಗೆ ಸನ್ಮಾನ ಅಗತ್ಯ. ಹೆಚ್ಚಿನವರಿಗೆ ಸಮಸ್ಯೆಯಿಂದ ಹೊರ ಬಂದು ಕೆಲಸ ಮಾಡಲು ಆಗದೆ ತೊಳಲಾಡುತ್ತಿದ್ದಾರೆ. ಅಂತಹವರನ್ನು ಗುರ್ತಿಸಬೇಕು. 1985ರ ನಂತರ ನಮ್ಮ ಜನಾಂಗ ಬೆಳಕಿಗೆ ಬರುತ್ತಿದೆ. ಅಧಿಕಾರ ಇರುವಾಗ ಸಾಧ್ಯವಿರುವಷ್ಟು ಸೇವೆ ಮಾಡಿದರೆ ಯಾರು ಅದನ್ನು ಮರೆಯಲಾರರು. ಕಾನೂನು ಪ್ರಕಾರವೇ ಕೆಲಸ ಮಾಡುವುದನ್ನು ಸ್ವಲ್ಪ ಇಳಿಸಿ ಮಾನವೀಯತೆಯನ್ನು ಗಮನಿಸಿ ಬಡವರಿಗೆ ಸಹಾಯ ಮಾಡಬೇಕು. ಸಂಸ್ಕೃತಿ, ಸಂಪ್ರದಾಯವನ್ನೆಂದೂ ಮರೆಯದೇ ಬೆಳೆಸಬೇಕು ಎಂದರು.

ಮೊದಲಿಗೆ ಕೆದಂಬಾಡಿ ಜಯಶ್ರೀ, ಬಿಂಧುಶ್ರೀ ಪ್ರಾರ್ಥಿಸಿದರೆ ಕಾರ್ಯದರ್ಶಿ ಪೈಕೇರ ಅನಂತ್‌ರಾಮ್ ಸಂದೇಶ ವಾಚಿಸಿದರು. ಉಪಾಧ್ಯಕ್ಷ ಕೋರನ ಪೂಣಚ್ಚ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮವನ್ನು ನಿರ್ದೇಶಕ ಹುದೇರಿ ನಾಗೇಶ್ ಮತ್ತು ಖಜಾಂಚಿ ಕರ್ಣಯ್ಯನ ವಿಶ್ವನಾಥ್ ನಿರೂಪಿಸಿದರು. ●

—ಸಂಗಾತಿ ವರದಿ

## ಪ್ರಜ್ವಲಿಸಲಿ

ಕೊ—ಡಗಿನ ಜನರ ಆದರಲ್ಲೂ ಗೌ
ಡ—ಬಾಂಧವರ ಆಚಾರ ವಿಚಾರ ಆಗು ಹೋ
ಗು—ಗಳನ್ನು ಪರಿಚಯಿಸುತ್ತಾ ನಮ್ಮ
ಸಂ—ಸ್ಕೃತಿಯ ಬಗ್ಗೆ ಅರಿವು ಮೂಡಿಸುವ ಹೊಣೆ
ಗಾ—ರಿಕೆಯನ್ನು ಹೊತ್ತು ಬಂದು ಗೌಡ ಜನಾಂಗದ ಪ್ರ
ತಿ—ಕುಟುಂಬದಲ್ಲಿ ಪ್ರಜ್ವಲಿಸುತ್ತಿರುವ ಪತ್ರಿಕೆ.

— ಅಣ್ಣೆಚ್ಚಿರ ಭಾರತಿ ಸೋಮಣ್ಣ,
ಮಕ್ಕಂದೂರು.

## ನಾನಾ ಅರ್ಥ (ಅನರ್ಥ ಕೋಶ)

1. ಕೊಡೆಯೇ ಅಲ್ಲದ ಕೊಡೆ—ನಾಯಿಕೊಡೆ
2. ಮುಳ್ಳೇ ಅಲ್ಲದ ಬಾಗಿಲು—ಮುಳಬಾಗಿಲು
3. ತಿನ್ನಲಾರದ ಬಾಯಿ—ಬೊಂಬಾಯಿ
4. ನೀರೇ ಇಲ್ಲದ ಹೊಳೆ—ಐಹೊಳೆ
5. ಮೇಯಲಾರದ ರಾಸು—ಮದ್ರಾಸು
6. ಸೂರೇ ಇಲ್ಲದ ಊರು—ಮೈಸೂರು

—ಬಾಡನ ಎಸ್. ಶಕುಂತಲ, ಮೈಸೂರು

# ನಿಮ್ಮ ಪತ್ರಗಳು

## ಗೋರ್ಕಲ್ಲ ಮೇಲೆ ಮಳೆ ಬಿದ್ದಂತೆ

ಮಾನ್ಯರೆ,

ನಮ್ಮ ಜನಾಂಗದ ಜನವಾಣಿಯಾಗಿರುವ "ಕೊಡಗು ಸಂಗಾತಿ" ಪತ್ರಿಕೆ ಪ್ರಗತಿ ಪಥದತ್ತ ಸಾಗುತ್ತಿದೆ. ಅದನ್ನು ಮುಂದೆ ತರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನಾನು ಬೆಂಗಳೂರಿನಲ್ಲಿ ಕೆಲವು ಗೌಡ ಬಾಂಧವರಲ್ಲಿ ಚಂದದಾರರಾಗಲು ವಿನಂತಿಸಿಕೊಂಡೆ, ಕೆಲವರಾದರು. ಇನ್ನು ಕೆಲವರು ಕೀಳು ಭಾವನೆಯಿಂದ "ಅದೆಂತಹ ಪತ್ರಿಕೆ, ಕೇವಲ 4–5 ಪುಟಗಳನ್ನು ಸ್ಟ್ಯಾಪಲರ್ ಪಿನ್ನ್ ಹಾಕಿ ಕಳುಹಿಸುತ್ತಾರೆ ಎಂದರು. ಅವರಿಗೆ ನಾನು ಪತ್ರಿಕೆಯ ಉದ್ದೇಶ ಮತ್ತು ಅದರಿಂದ ನಮ್ಮ ಜನಾಂಗಕ್ಕೆ ಆಗುವ ಲಾಭಗಳನ್ನು ತಿಳಿಸಿದೆ. ಇಷ್ಟಾದರೂ ಅಂಥವರ ಮೇಲೆ 'ಗೋರ್ಗಲ್ಲ ಮೇಲೆ ಮಳೆ ಬಿದ್ದಂತೆ' ಯಾವ ಪರಿಣಾಮವು ಬೀರಲಿಲ್ಲ. ಈಗ ನಮ್ಮ ಗೌಡ ಜನಾಂಗದಲ್ಲಿ ವರುಷಕ್ಕೆ 120/– ಚಂದಾ ಹಣ ಕೊಡಲು ಅಸಾಧ್ಯವಾಗುವಷ್ಟು ದಟ್ಟ ದರಿದ್ರತನ ಇರಲಿಕ್ಕಿಲ್ಲವೆಂದು ನನ್ನ ಭಾವನೆ. ಇನ್ನಾದರು ಚಂದದಾರರಾಗದೆ ಇರುವವರು, ಮನೆಗೆ ಒಬ್ಬರಂತೆ ಚಂದದಾರರಾಗಿ ನಮ್ಮ ಪ್ರಗತಿಗೆ ದಾರಿದೀಪವಾಗಿರುವ ಕೊಡಗು ಸಂಗಾತಿಯನ್ನು ಮುಂದೆ ತರಲೇಬೇಕು.

ಪೂಜಾರೀರ ಗೋಪಾಲ, ಬೆಂಗಳೂರು.

## ಹೆಚ್ಚಿಗೆ ನಿಗಾವಹಿಸಿ

ಮಾನ್ಯರೆ,

ಈಗ ನಾನು ಹೇಳಬೇಕಾದ ವಿಷಯವೇನೆಂದರೆ ಕೆಲವು ವಾರ ಪತ್ರಿಕೆಗಳಲ್ಲಿ ಪ್ರಕಟವಾದ ನಗೆಹನಿಗಳ ಯಥಾವತ್ತು ನಕಲು ಕೊಡಗು ಸಂಗಾತಿಯ ಇತ್ತೀಚಿನ ಕೆಲವು ಸಂಚಿಕೆಗಳಲ್ಲಿ ಪ್ರಕಟವಾಗುತ್ತಿರುವುದನ್ನು ಗಮನಿಸಿದ್ದೇನೆ. ಬೇರೆಲ್ಲೋ ಓದಿದ ಲೇಖನಗಳ ಪಡಿಯಚ್ಚುಗಳನ್ನು ನಮ್ಮ ಪತ್ರಿಕೆಯಲ್ಲಿ ಕಂಡಾಗ ಮನಸ್ಸಿಗೆ ಕಸಿವಿಸಿಯಾಗುತ್ತದೆ. ದಯವಿಟ್ಟು ಇಂತಹ ಹಳಸಲು ಸರಕುಗಳು ಪತ್ರಿಕೆಯೊಳಗೆ ನುಸುಳದಂತೆ ನಿಗಾ ವಹಿಸಿ. ಇದರಿಂದ ಪತ್ರಿಕೆಯ ಗುಣಮಟ್ಟಕ್ಕೆ ಧಕ್ಕೆಯಾಗುತ್ತದೆ. ನಿಮ್ಮ ಕೆಲಸದ ಒತ್ತಡ, ನೀವು ವಹಿಸುತ್ತಿರುವ ಕ್ರಮದ ಬಗೆಗೆ ಊಹಿಸಬಲ್ಲೆ. ಆದರೂ ಪ್ರಕಟಣೆಗೆ ಸಿದ್ಧಗೊಂಡ ಲೇಖನಗಳತ್ತ ಅಂತಿಮವಾಗಿ ನೀವು ಒಮ್ಮೆ ಕಣ್ಣಾಡಿಸಿದಲ್ಲಿ ಇಂತಹ ತೊಡಕುಗಳನ್ನು ನಿವಾರಿಸಬಹುದೆಂದುಕೊಳ್ಳುತ್ತೇನೆ.

'ಕೊಡಗು ಸಂಗಾತಿ' ನಮ್ಮವರ ಹೆಚ್ಚಿನ ಮನೆಯನ್ನು ತಲುಪಲು ಇನ್ನೂ ಸಾಧ್ಯವಾಗಿಲ್ಲ. ಮಡಿಕೇರಿ ಪಟ್ಟಣದಲ್ಲಿ ವಾಸಿಸುತ್ತಿರುವವರು ಕೂಡ ಬೇರೆಯವರಿಂದ ಪತ್ರಿಕೆಯನ್ನು ಎರವಲು ಪಡೆದು ಓದುವ ಹವ್ಯಾಸವನ್ನು ಇನ್ನೂ ಮುಂದುವರಿಸಿರುವುದನ್ನು ಕೆಲವು ಕಡೆ ಗಮನಿಸಿದ್ದೇನೆ. ಇದರಿಂದಾಗಿ ಪತ್ರಿಕೆ ತನ್ನ ಪ್ರಸಾರವನ್ನು ಹೆಚ್ಚಿಸಿಕೊಳ್ಳಲು ಮುಕ್ತವಾದ ವಾತಾವರಣ ನಿರ್ಮಾಣವಾಗುವುದಿಲ್ಲ. ಸ್ಥಳೀಯರು ಕೆಲವರನ್ನು ಪ್ರೇರೇಪಿಸಿ ಪತ್ರಿಕೆಯ ಬಗ್ಗೆ ಇನ್ನೂ ಹೆಚ್ಚಿನ ಪ್ರಚಾರ ಕೈಗೊಳ್ಳುವ ಅಗತ್ಯವಿದೆಯೆನಿಸುತ್ತದೆ.

—ಸಿ. ಸಿ. ಪೂವಯ್ಯ, ಹೊಸಪೇಟೆ.

## ಉದ್ಯೋಗ ವಾರ್ತೆ

### ಅರ್ಜಿ ಆಹ್ವಾನ

ಬೆಂಗಳೂರಿನ ಸರ್ಕಾರಿ ಫಾರ್ಮಸಿ ಕಾಲೇಜಿನಲ್ಲಿ ಫಾರ್ಮಸಿಯಲ್ಲಿ ಸ್ನಾತಕೋತ್ತರ ಪದವಿ [ಎಂ. ಫಾರ್ಮ] ತರಗತಿಗೆ ಸೇರಬಯಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಪ್ರಾಂಶುಪಾಲರು, ಸ. ಫಾ. ಕಾಲೇಜು ಸುಬ್ಬಯ್ಯ ವೃತ್ತ, ಪಿ. ಕಾಳಿಂಗರಾವ್ ರಸ್ತೆ, ಬೆಂಗಳೂರು–27 ಇವರಿಂದ ಹತ್ತು ರೂಪಾಯಿ ಶುಲ್ಕ ಪಾವತಿ ಮಾಡಿ ಪಡೆದುಕೊಳ್ಳಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಕಾರ್ಯದರ್ಶಿ. ಆಯ್ಕೆ ಸಮಿತಿ, ಸ. ಫಾ, ಕಾಲೇಜು, ಬೆಂಗಳೂರು–27 ಇವರಿಗೆ ಈ ತಿಂಗಳ 20ರೊಳಗೆ ಸಲ್ಲಿಸಬೇಕು. ನಂತರ ಅರ್ಹ ಅಭ್ಯರ್ಥಿಗಳು ಎಲ್ಲ ಮೂಲ ದಾಖಲಾತಿಗಳೊಂದಿಗೆ ಫೆಬ್ರವರಿ 26ರಂದು ನಡೆಯುವ ಸಂದರ್ಶನಕ್ಕೆ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

## ಹಿ ತ ನು ಡಿ

ಸಮಯಕ್ಕೆ ಸರಿಯಾಗಿ ಕೆಲಸವನ್ನು ಮಾಡಿ ಮುಗಿಸುವವರು ಕ್ರಮಬದ್ಧವಾದ ಚಿಂತನಶೀಲತೆಯನ್ನು ಬೆಳೆಸಿಕೊಂಡಿರುತ್ತಾರೆ.

—ಪಿಟ್‌ಮನ್

**ಅರೆ ಭಾಷಿಕ ವಿಭಾಗ**

## ಬಯಸದೇ ಬಂದ ಭಾಗ್ಯ
# ಉಳ್ಸೋಕು, ಬೆಳ್ಸೋಕು, ನಮ್ಮೆಲ್ಲರ ಆದ್ಯ ಕರ್ತವ್ಯ

ಹಲೊ ! ಭಾವ ಮತ್ತೆ ವಿಷ್ಯ ಗೊತ್ತುಟ್ಟಾ. ಏನದ್ ? ಅದೇ ನಮ್ಮ ಜನಾಂಗದ್ ಒಂದು ಪತ್ರಿಕೆ ಬರ್‍ತಾ ಉಟ್ಟುಗಡಾ? ಹೌದಾ ! ಏನಾರಾಗಲಿ, ಅಂತೂ ನಮ್ಮವ್ ಮನ್ಸ್ ಮಾಡ್ಯೊಳಲೆ. ಸರಿ, ಅದ್ ಯಾವುದ್. ಅದ್ರ ಹೆಸ್ರ್ 'ಕೊಡಗು ಸಂಗಾತಿ' ತ. ಹೇ...ಅದ್ ಹಂಗೆ 'ಗೌಡ ಸಂಗಾತಿ' ತ ಇದ್ರೆ ಲಾಯಕಿತ್ತ್. ನೀವ್ ಹೇಳ್ದು ಸರಿ. ಯಾರಿಗೊತ್ತು ಈ ಹೆಸ್ರ್‌ನ ಹಾಕಿದ್ ಯಾಕೇತಾ. ಅಲಾ ಇದ್ರ ಸಂಪಾದಕರ್ ಯಾರ್ ? ಛೆ...ಅವನ ಗೊತ್ಲೆ, ಅದೇ ಪಟ್ಟಡ ಪ್ರಭಾಕರ್. ಯಾರಂವ, ಎಲ್ಲೋ ಬ್ಯಾಂಕ್‌ಲಿ ಕೆಲ್ಸಲಿ ಉಟ್ಟುಗಡ. ಆದ್ ಮೈಸೂರ್‌ಲಿ ಕಂಡದೆ. ಬ್ಯಾಂಕ್‌ಲಿ ಇದ್ದ್‌ಕಂಡೇ ಪತ್ರಿಕೆ ಮಾಡ್ತಾ ಉಟ್ಟಾ. ಪರ್‍ವಾಗಿಲ್ಲೇ, ಅವನ ನಿಜಕೂ ಮೆಚ್ಚೊಕು. ಅಂದ್ರೆ ಒಂದು ಭಾವ, ಅದ್ ಅರೆಭಾಷೆಲಿ ಬಂದಿದ್ರೆ ಬಾಳ ಲಾಯಿಕ್ಕಿತ್. ಮತ್ತೆ ಯಾವುದರ್ಲಿ, ಒಟ್ಟಾರೆ ಹೇಳ್ದಾದರೆ ನಮ್ಮ ಭಾಷೆನ ಓದಿಕೆ ಒಂದು ಛಾನ್ಸ್ ಆತಲೇ ಬಿಡಿ. ಅಲ್ಲಾ ಪಂಡೂಮ್ಮೆ 'ಗೌಡದೊನಿತ್ತೇಳಿ ಪತ್ರಿಕೆ ಹೊರಟದ್ದ್, ಮತ್ತೆ ಅದರ ದೊಸಿಯೇ ಇಲ್ಲದಾತ್‌ಗಡ ! ಹಂಗೆ ಏನಾದರ್...ಇದ್? ಈ ಸರ್ತಿ ನಾವೆಲ್ಲಾ ಮತ್ತೆ ಜನಾಂಗದವ್ ಸಹಕಾರ ಕೊಟ್ಟೇ ಕೊಡೊಕು ನೋಡಿ. ಯಾಕತ್ತೇಳ್ರೆ ಇತರ ಜನಾಂಗದವ್ರದ್ ಸಹಕಾರ ಕೊಟ್ಟೇ ಕೊಡೊಕು ನೋಡಿ. ಯಾಕೆತ್ತೇಳ್ರೆ ಇತರ ಜನಾಂಗದವ್ರದ್ ನೋಡಿ...ಸರಿಸರಿ, ನಾ ಬನ್ನೆರಾ...ಮತ್ತೆ ಕಾಂಬನೊ. ಆತ್, ಹಿಂಗೆ ಒಂದ್ ದಿನ ಮಾತ್‌ಕತೆ ನಡ್ತ್. ಎರಡ್ ವರ್ಷ ದಾಟತ್.

ಈ ಮಧ್ಯೆ ಒಮ್ಮೆ ನಾನ್ ಬೆಂಗಳೂರ್‌ಗೆ ಏನೊ ಕೆಲ್ಸದ ಮೇಲೆ ಹೋಗಿ ಬಾಕನಾ, ಮೈಸೂರ್‌ಲಿರ್‌ವ 'ಕಲಾಮಂದಿರ'ನ ನೋಡ್ದೆ. ಆಗ ನಂಗೆ ಗ್ಯಾನಾತ್, ಇಂತ ಮಂದಿರಕೆ ಹೋಕೆ ಯಾಗ ಛಾನ್ಸ್ ಸಿಕ್ಕದೆತ, ಹೆಂಗುಟ್ಟುತ್ತೇಳ್ಕಂಡ್ ಬಂದೆ. ನಾನೊಬ್ಬ ಉದ್ಯೋಗಸ್ತನಾದರ್‌ಂದ ಮಡಿಕೇರಿಗೆ ವರ್ಗಾತ್. ನಂಗೆ ಸಮಾಜಕ್ಕೆ ಏನಾರ್ ಸೇವೆ ಮಾಡೋಕುತ್ತೇಳಿ ಕಾಳಜಿ. ಹಂಗೆ, ಮಡಿಕೇರಿಲಿ ದಿಢೀರಾಗಿ 'ಕೊಡಗ್ ಗೌಡ ಅಕಾಡೆಮಿ'ದ್ ಉಪಾಧ್ಯಕ್ಷನಾಗಿ ಜನಾಂಗದವ್ ನೇಮಕ ಮಾಡ್ದೊ. ಸ್ವಲ್ಪ ದಿನ ಕಳ್ದ ಮೇಲೆ 'ಕೊಡಗು ಸಂಗಾತಿ'ದ್ ವಾರ್ಷಿಕೋತ್ಸವ ನಡ್ದದೇ ತೇಳ್ದು ಗೊತ್ತಾತ್. ಮತ್ತೆ ಆಹ್ವಾನ ಬಾತ್. ಇಲ್ಲಿಂದ ಕೆಲವು ಸದಸ್ಯರ್‌ಗ ಮತ್ತೆ ಹಿತೈಷಿಗ ಹೋಕೆ ಏರ್ಪಾಡಾತ್. ನಾನ್ ಹೊರ್‍ಟೆ. ಆಗ ಗ್ಯಾನಾತ್ ಹಿಂದೊಮ್ಮೆ ಗ್ಯಾನ ಮಾಡ್ದಂಗೆ ಆ ಛಾನ್ಸ್ ಬಂದೇ ಬಾಡ್ತ್‌ತ. ಮನ್ಸ್‌ಗೆ ಬಾರೀ ಕುಸಿಯಾತ್. ನಾನ್ ನಮ್ಮ ಸಂಸ್ಕೃತಿ ಉಡುಗೆಯಾದ ಕುಪ್ಪಸದಟ್ಟೆಲಿ ಹೋದೆ. ಅಂದ್‌ನ ವ್ಯವಸ್ಥೆನ ಸಂಗಾತಿ ಬಳಗ ಮತ್ತೆ ಅರೆಭಾಷೆ ಸಾಂಸ್ಕೃತಿಕ ಸಮಿತಿಯವು ಬಾಳ ಲಾಯಕ್ಕಲಿ ಮಾಡಿದ್ದೊ. ಆಗ ನನ್ನ ಮನ್ಸ್‌ಗಾತ್ ಒಂದೆರಡ್ ಮಾತಾಡ್ಕೆ ಅವಕಾಶ ಸಿಕ್ಕುದೊತ. ಇನ್ನೇನ್ ಸಭೆ ಸುರಾಕು, ಪ್ರಭಾಕರ್ ನವ್ ಬಂದ್ ಹೇಳ್ದೊ, ಭಾವ ನೋಡಿ ಒಂದೆರಡ್ ಮುಖ್ಯ ನೆಂಟ್ರ್‌ಗ ಬಾತ್ಲೆ. ಆದ್ರ್‌ಂದ ನೀವೊಬ್ಬ ನೆಂಟ್ರಾಗಿ ವೇದಿಕೆಗೆ ಬರೋಕುತ. ನಂಗೆ ಒಂದ್‌ಗಳಿಗೆ ನಂಬಿಕೆ ಆತ್ಲೆ. ಇದೇ ನಂಗೆ ಬಯಸದೇ ಬಂದ ಭಾಗ್ಯತ್ತೇಳಿ ಒಪ್ಪಿಕಂಡೆ.

ಇಲ್ಲಿ ಒಂದ್ ವಿಷ್ಯ ಗ್ಯಾನ ಮಾಡೋಕುತ್ತೇಳ್ರೆ. ಯಾವುದೇ ಸಂಸ್ಥೆ ತನ್ನ ವಾರ್ಷಿಕ ಸಮಾರಂಭನ ಆಡಂಬರಲಿ ಮಾಡೊಕ್ಕುತ್ತೇಳಿ ಮುಖ್ಯ ನೆಂಟ್ರಗಳ್ನ ಕರ್‍ಸಿ, ಅವು ಆಕಿರ್‌ಗೆ ಬಾದ್ಲೆತ್ತೇಳ್‌ರೆ ನಡ್ಸವರ ಪಾಡ್. ಆಗ ನಮ್ಮಂತವು ಸಿಕ್ಕಿ ಆ ನೆಂಟ್ರ್ ಸ್ಥಾನನ ತುಂಬಿ ಸಹಕಾರ ನೀಡದಿದ್ದರೆ ಹೆಂಗೆ. ಒಟ್ಟಾರೆ ಆ ದಿನದ ಸಮಾರಂಭ ಲಾಯಕ್ಕಾಗಿ ನಡೆಯುದು ಮುಖ್ಯ ತಾನೆ. ಅಂತು ನಂಗೆ ಮಾತಾಡ್ವ ಚಟ ಇರ್ದ್‌ರ್‌ಂದ ಮಾತಾಡ್ಕೆ ಛಾನ್ಸ್ ಸಿಕ್ಕುದು ಗ್ಯಾರಂಟೀತ ಗ್ಯಾನ ಮಾಡಿ ಕಂಡೆ. ನಾನ್ ಮಾತಾಡ್ದ್ ಎಲ್ಲವ್‌ಕೆ ಕುಸಿಯಾತ್ ಕಂಡದೆತ ನನ್ನ ನಂಬಿಕೆ. ಆದ್ರೆ ಒಬ್ಬ ಹೇಳ್ತ್, ಆಖಿರಿಗೆ ಮಾತ್ ಉದ್ದ ಎಳ್ದ್ ಬುಟ್ರೇತಾ. ಇನ್ನೊಬ್ಬ ಬಾರಿ ಲಾಯಕ್ಕಾಗಿ ಮಾತಾಡ್ದತ. ಹಳೇ ಸ್ನೇಹಿತ ಹೇಳ್ತ್. ನೀನ್ ಮಿಂಚಿ ಬುಟ್ಟರಾ ! ಅಂತು ವೇದಿಕೆಲಿ ನಂಗೆ ಹೂ ಹಾರ ಹಾಕಿ ಸನ್ಮಾನ ಮಾಡಿ, ಎಲ್ಲವರಂಗೆ ಮಾತಾಡ್ಕೆ ಅವಕಾಶ ಮಾಡಿಕೊಟ್ಟದ್ ಒಂದ್ ಅಪೂರ್ವ ಪ್ರಸಂಗತ್ತೇಳಿ ತಿಳ್‌ಕಣೊಕು. ಇದೆಲ್ಲಾ ಹೆಂಗಾತ್. 'ಕೊಡಗ್ ಸಂಗಾತಿ' ಹುಟ್ಟದ್ರಂದ ಆತ್. ಇಲ್ಲತ್ತೇಳ್ರೆ ನಮ್ಮಂತವುನ ಕೇಳವು ಯಾರ್ ! ಎಲ್ಲಾ ಒಂದ್ ಮೂಲೆಲಿ ಬಿದ್ದಿರಕಾಯಿತ್ !

ಈ ಸಂಗಾತಿ ಬಂದ ಮೇಲೆ ಏನಾದ್ರೊಂದು ಬರೆಯುಕ್ಕುತ್ತೇಳಿ ಗ್ಯಾನ ಮಾಡಿಕಂಡೇ ಕಾಲಕಳ್ತ್ ನೋಡಿ. ಈ ಪತ್ರಿಕೆಂದ

ಜನಾಂಗದವುಕೆಲ್ಲಾ ಎಷ್ಟೊಂದು ಉಪಕಾರ ಉಟ್ಟಲ್ಲತ್ತೇಳ್ಳನ ಪ್ರತಿಯೊಬ್ಬನೂ ಚಿಂತಿಸೊಕು. ಜನಾಂಗದ ಸಾಹಿತಿಗಳಿಗೆ, ಬರವಣಿಗೆದಾರ್‌ರಿಗೆ, ಹೂಬಿಸಿಲ್‌ಗೆ ಪ್ರಾಣಿಗ ಬಂದಂಗೆ ಅವಕಾಶ ಮಾಡಿಕೊಟ್ಟದ್ದೇ ಈ ಸಂಗಾತಿ. ಇದಕ್ಕೂ ಹಿಂದೆ ಜನಾಂಗದ ಕೆಲವು ಬೆರಳೆಣಿಕೆಯಷ್ಟ್ ಮಾತ್ರ ಎಲ್ಲೊ ಕಲ್ಲ್ ಹೊಡ್ಡಂಗೆ ಬ್ಯಾರೆ ಪತ್ರಿಕೆಲಿ ಬರೆಯುತ್ತಿದ್ದ ಗ್ಯಾನ. ಈಗ ಸಂಗಾತಿ ನಮ್ಮ ಜೀವನ ಸಂಗಾತಿಯಾಗಿ ಬದ್‌ಕ್ ಬಾಳ್‌ನ ಸಂಸ್ಕೃತಿಗಳ್ನ ಜನಾಂಗದ ಅಂತರಾಳಕ್ಕೆ ಇಳ್‌ಸ್ತುಟ್ಟು. ನಾವೆಲ್ಲವೂ ನಮ್ಮ ನಿಜವಾದ ಆಚಾರ ವಿಚಾರಗಳ ಮರ್ತ್, ಯಾವುದೊ ಅರ್ಥ ಇಲ್ಲದ ಸಂಸ್ಕೃತಿನ ಆಚರ್ಸಿಕಂಡಿರ್‌ವ ಈ ಕಾಲಲಿ ಸಂಗಾತಿ ಬಂದ್ ನಮ್ಮನೆಲ್ಲಾ ಬೊಡ್ಡೆಬ್ಸಿ ಹೇ ಮುಟ್ಟಾಳಗ ನಿಮ್ಮದ್ ಯಾವ್‌ದ್ ಸಂಸ್ಕೃತಿ, ಏನಾದರ್ ಗೊತ್ತುಟ್ಟಾತ್ತೇಳಿ. ನೋಡಿ ಇಲ್ಲಿಟ್ಟು, ಇದ್ರ ಬುಟ್ರೆ ಮತ್ತೆ ಮುಂದಕ್ಕೆ ನಿಮ್ಮನ ಗೌಡತ್ತೇಳಿ ಯಾರು ಹೇಳದಂಗಾದೆ ತೇಳ್ವ ಭಾವನೆನ ಮತ್ತೆ ಸ್ವಾಭಿಮಾನನ ಕೆರಳ್‌ಸ್ತ ಉಟ್ಟು. ಅಲ್ದೆ ನಮಿಗಾಗಿ, ನಮ್ಮದ್‌ತೇಳ್ವ ಒಂದೇ ಒಂದ್ ಪತ್ರಿಕೆ ಇದ್.

ಇಲ್ಲಿ ಪತ್ರಿಕೆ ಯಾರ್ದ್ದ ತೇಳ್ದು ಮುಖ್ಯ ಅಲ್ಲ. ಯಾರ್ ನಡ್‌ಸ್ತಿರ್‌ದು, ಇದರ ಅವಶ್ಯಕತೆ ಎಷ್ಟಟ್ಟು ಮತ್ತೆ ಯಾಕೆ ಬೇಕು ತೇಳ್ದು ಮುಖ್ಯ. ನಮ್ಮವ್‌ಕೆ ಪತ್ರಿಕೆ ಇಲ್ಲದಿರ್‌ಕಾಕನ ಎಂತ ಮಾರಾಯ! ಇಷ್ಟೆಲ್ಲಾ ನಮ್ಮದ್ ಇದ್ದ್‌ಕಂಡ್ ಒಂದು ಪತ್ರಿಕೆ ನಡ್‌ಸವಸ್ಟ್ ಯೋಗ್ಯತೆ ಯಾರಿಗೂ ಇಲ್ಲದಾತಾ. ಛೀ ಎಂತಹ ಅವಮಾನ ಮತ್ತೆ ನಾಚಿಗೇಡ್. ಹಿಂಗೆ ಎಲ್ಲವ್ ಮಾತಾಡ್ವೆ. ಇಂತದನೆಲ್ಲಾ ಕೇಳಿಕಂಡ್, ಒಬ್ಬ ವ್ಯಕ್ತಿ ತನ್ನೆಲ್ಲಾ ಜೀವನನ ಪತ್ರಿಕೆಗಾಗಿ ಧಾರೆ ಎರ್ದ್ದ, ಪಣತೊಟ್ಟ್ ಜನಾಂಗದ ಸರ್ವ ಏಳ್ಗೆಗೆ ದುಡಿಯುತ್ತಿರ್‌ದು ನಾವ್‌ಗೆ ಹೆಮ್ಮೆ. ಅಂತವಂಗೆ ಜನಾಂಗದವು ಅಭಯ ಹಸ್ತ ಚಾಚಿ ಸಾಕಾರ ನೀಡದಿದ್ರೆ ಅದಕ್ಕೆಂತರ್ಥ! ಪತ್ರಿಕೆ ಇಲ್ಲದಿರ್‌ಕನಾ ಇಲ್ಲೇತ. ಸಂಗಾತಿ ಬಂದ ಮೇಲೆ ನೂರೆಂಟ್ ಟೀಕೆ ಟಿಪ್ಪಣಿಗ. ಕೆಲವು ಅವಂಗೆ ಬ್ಯಾರೆ ಕೆಲ್ಸ ಇಲ್ಲೇನಾ ಬಾಯಿಗೆ ಬಂದಂಗೆ ಬೊಯ್ಯೊದು. ಇದ್ ಯಾವ ನ್ಯಾಯ. ನಾವೆಲ್ಲಾ ಇಂದ್ ನಮ್ಮನ ಗುರ್ತಿಸಿಕ್ಕನ್‌ಕೆ ಈ ಪತ್ರಿಕೆ ಪ್ರಚಾರ ಸಿಂಹಪಾಲ್‌ತ್ತೇಳ್ರೆ ತಪ್ಪಾ! ನಮ್ಮ ಭಾಷೆ, ಸಾಹಿತ್ಯ, ಕಲೆ ಮತ್ತೆ ಜಾನಪದ ಬೆಳೆಯೊಕ್ಕುತಾದ್ರೆ ಪತ್ರಿಕೇನೆ ಆಧಾರ. ಹಂಗೆನೆ ಈ ಪ್ರಪಂಚಲಿ ಪತ್ರಿಕೆ ಪ್ರಚಾರ ಇಲ್ದೆ ಏನಾದ್ರ್ ಬೆಳ್ದದ್ದಕ್ಕೆ ದೃಷ್ಟಾಂತ ಉಟ್ಟಾ! ಅದ್ಸರಿ ಇನ್ನೊಂದ್ ತಮಾಸೆ ಕೇಳಿ. ಜನಾಂಗದ ಕೆಲವು ತಾವ್ ಪತ್ರಿಕೆನ ಓದುಲೆ ಮತ್ತೆ ಓದುವರ್ನ ಬುಡ್‌ದುಲೆ. ಮತ್ತೆ ಯಾರ್ಯಾರ ಮಾತ್ ಕಟ್ಟಕಂಡ್ ಇಸಾಪ್‌ಕಟ್ಟಂಗೆ ಮಾತಾಡ್ದು. ಇಂವ ಪತ್ರಿಕೆ ನೋಡಿಯೇ ಇರ್ದುಲೆ! ಎಂತ ವಿಪರ್ಯಾಸ. ಒಟ್ಟಾರೆ ನಮಿಗೆ, ನಾವು ಮತ್ತೆ ನಮ್ಮವು ನಮ್ಮದ್‌ತೇಳ್ವ ಅಭಿಮಾನ ಬೇಕಲ್ಲಾ! ಈ ಪತ್ರಿಕೆಂದ ಎಂತ ಸತ್ಪರಿಣಾಮ ಆಗ್‌ತ್ತಾ ಉಟ್ಟತ್ತೇಳ್ದು ಎಷ್ಟ್ ಜನಕ್ಕೆ ಗೊತ್ತುಟ್ಟು? ನಾವು ಎಲ್ಲಿಂದ ಬಂದೊ, ಹೆಂಗೆ ಬಂದೊ ತೇಳ್ವ ಕತೆನ ಹಿರಿಯರ್ ಅರ್ಥಂಬರ್ಥ ಹೇಳ್‌ಕನ ಕೇಳ್‌ತ್ತಿದ್ದೊ. ಈಗ ಪತ್ರಿಕೆ ಜನಾಂಗಕ್ಕೆ ನಿಜವಾದ ಪುರಾಣಗಳನ್ನ ಕಣ್ಣೆದುರಿಗೆ ಇಡ್ತುಟ್ಟು. ಇತಿಹಾಸದ ಹಾಳೆಗಳ್ಲಿ ಹಾದು ಹೋಗಿ ಮುಚ್ಚಿ ಹೋದ ಜನಾಂಗದ ವೀರಧೀರರ್ನ ಗ್ಯಾನ ಮಾಡ್ತ್ತುಟ್ಟು. ಕೊಡ್‌ಗ್‌ನ ಚರಿತ್ರೆಲಿ ಗೌಡ ಜನಾಂಗದ ಪಾತ್ರನ ಪರಿಚಯ ಮಾಡ್ತಾ, ಪತ್ರಿಕೆಲಿ ಬರ್ತಾ ಇರ್ವ ಲೇಖನಗ ಯುವ ಪೀಳಿಗೆಗೆ ಸ್ಫೂರ್ತಿಯಾಗಿ ಪ್ರೇರಣೆಯಾಗ್ತಾ ಉಟ್ಟು.

ನಮ್ಮ ಜೀವನದುದ್ದಕ್ಕೂ ಎಂತಹದಕ್ಕೆಲ್ಲಾ ಅನಾವಶ್ಯಕವಾಗಿ ಖರ್ಚ್ ಮಾಡ್ವೆ. ಇವ್ಕೆ ಪ್ರೋತ್ಸಾಹತ್ತೇಳ್ರೆ ಏನಾದ್ರ್ ಗೊತ್ತುಟ್ಟಾ. ಒಂದು ಪತ್ರಿಕೆನ ಹುಟ್ಟ್‌ಹಾಕಿ, ಅದರ ಪ್ರಚಾರಕ್ಕಾಗಿ ಎಷ್ಟ್ ಖರ್ಚಾದೆ ತೇಳ್ದನ ಯಾರಾದರ್, ತಲೆ ಕೆಡ್ಸಿಕಂಡೊಳೊ ಇಲ್ಲೆ, ಅದ್ರ ಬದ್ಲ್, ಈ ಪತ್ರಿಕೆಲಿ ಇಂವ ಸಕತ್ ದುಡ್ಡ್ ಮಾಡ್ತಾ ಉಟ್ಟತ್ತೇಳವೆ ಜಾಸ್ತಿ ತಲೆ ಕೆಡಿಸಿಕಂಡದ್. ಈಗ ನೋಡಿ ಪತ್ರಿಕೆ ಸುಮ್ಮನೆ ಬಂದಿದೆಯಾ, ಪೇಪರ್ ಖರ್ಚ್, ಮುದ್ರಣಖರ್ಚ್, ಸಿಬ್ಬಂದಿಗಳ ಖರ್ಚ್, ಯಂತ್ರಗಳ ಮೇಲ್ವಿಚಾರಣೆ, ಸಂದರ್ಶನದ ಖರ್ಚ್, ಲೇಖನ ಸಾಮಗ್ರಿಗ, ಪ್ರಯಾಣ ಭತ್ಯೆ, ದೂರವಾಣಿ, ಅಂಚೆವೆಚ್ಚತ್ತೇಳಿ ಒಂದ್ ಸಂಸ್ಥೆ ನಡ್‌ಸ್‌ಕನ ತುಂಬಾ ಖರ್ಚಾದೆ. ಹಂಗೆ ಈ ಖರ್ಚ್ ವೆಚ್ಚಗಳ ನಿಭಾಯಿಸೊಕ್ಕುತ್ತಾದರೆ, ಆದಾಯವೆಲ್ಲಿಂದ ಬರೋಕು. ಬರೀ ಪತ್ರಿಕೆಗಳ ಚಂದಾಗಳ್‌ಂದ. ಯಾಕೆತ್ತೇಳ್ರೆ ನಮ್ಮಲ್ಲಿ ಕೊಡ್‌ಗೈ ದಾನಿಗ ಇಲ್ಲೆಲಾ! ನಾವೇ ಖುದ್ದಾಗಿ ಭೇಟಿಯಾಗಿ ಫಸ್ಟ್ ಬೈಸಿಕಂಡ್, ಮಾತ್‌ಕತೆಯಾಗಿ ಕಷ್ಟಲಿ ಒಂದಷ್ಟ ಕೊಟ್ಟವೆ ತೇಳ್ದ್ ಎಲ್ಲವ್ಕೆ ಗೊತ್ತುಟ್ಟು. ಮತ್ತೆ ಹಂಗೆ ಕೊಡೊಕುತ್ತೇಳ್ರೆ ನಾವೇನ್ ದಾನಶೂರ ಕರ್ಣನ ವಂಶದವ! ಆದರೂ ನಮ್ಮ ಜನಾಂಗದಲ್ಲಿನ ಸ್ಥಿತಿವಂತರ್ ಎಸ್ಟ್ ಜನ ಮುಂದೆ ಬರ್‌ವೊ! ಯಾಕೆತ್ತೇಳ್ರೆ ಯಾವುದೇ ಸಂಘ,

18 ನೇ ಪುಟ ನೋಡಿ]

ಧಾರಾವಾಹಿ-21

ಮೂಲಕಥೆ : ಅಶ್ವಥಿ ಅರವಿಂದ್

ಅರೆಭಾಷೆಗೆ : ಎಂ.ಇ. ಮಹಮ್ಮದ್

# ಕರಿ ಚಿನ್ನ

ಸುಮಾರ್ ಹೊತ್ತ್ ಬೋರ್‌ಗುಡ್ಡೆ ದೇವಯ್ಯಂಗೆ ಅಲ್ಲಾಡ್ಕೇ ಆತ್ಲೆ. ಎಷ್ಟ ದೊಡ್ಡ ಮೋಸದ ಬಲೆಲಿ ಸಿಕ್ಕಿಬಿದ್ದೆ ನಾನ್, ಕಳ್ಳ ಬೋಳಿ...ಮಜ ಯಾವ್ದೋ ಒಂದ್ ಕಾಡ್ ಮೊಲನ ಕೊಂದ್‌ಬುಟ್ಟ್ ರಕ್ತದ ಚಾರ್‌ನ ತೋರ್ಸಿ ಮೂವತ್ತ್ ಸಾವ್ರ ಕಿತ್ತ್‌ಕಂಡ್ ಹೋತ್. ನನ್ನಂತ ಮುಠಾಳ ಈ ಲೋಕಲಿ ಬೇರೆ ಯಾರಾದ್ರ್ ಇರ್ವ? ದೊಡ್ಡ ಸಾವುಕಾರನಂಗೆ ಪ್ಯಾಂಟ್ ಕೋಟ್ ಹಾಕಂಡ್ ಒಂದ್ ಹತ್ತ್ ದಿನ ಬಾರ್‌ಲಿ ಕುದ್ದ್ ವಿಸ್ಕಿ ಕುಡ್‌ದದೆಗಡ... ರ್‍ಯಾಸ್ಕಲ್:

ಸಿಟ್ಟ್ ತಡಿಯಕೆ ಆಗದೆ ಅಂವ ಮುಷ್ಠಿ ಹಿಡ್‌ಕಂಡ್ ಹಲ್ಲ್ ಕಚ್ಚಿಕಂಡ್ ಮೇಜಿಗೆ ಗುದ್ದಿತ್. ಅವನ ಬಾಯಿಗೆ ಬಂದ ಹೊಲಸ್ ಮಾತ್‌ಲಿ ಬಯಿತ್.

* * *

ಇತ್ತ ಕೊಟ್ಟೂರ್‌ಲ್ಲಿ ಮೊದ್ವೆಗೆ ಹೋಗಿದ್ದ ಗಾಳಿಮರ ಸೋಮಯ್ಯ ಲಾಯ್ಕ ಕುಡ್ದ್ ಓಲಾಡಿಕಂಡ್ ಮನೆಗೆ ಬಾತ್.

ಮೊದ್ವೆಮನೆ ಗದ್ದಳನ ಮಗಳಿಗೆ ಹೇಳಿಕೆ ಅಂವ ಬಂದ ಕೂಡ್ಲೆ ಮಗಳ್ನ ಕರ್ತ್.

'ನೀಲೂ ಬಾವ್ವಾ ಇಲ್ಲಿ ನಿನ್ನ ಕರ್ಕಂಡ್ ಹೋಕಿತ್ತ್ ನೋಡ್. ಅದೆಂತ ಮೊದ್ವೆ ಯಾವ ಪಾಟಿ ಜನಗ. ಎಸ್ಟ್‌ತರದ ಕಳ್ಳ್, ಕೋಳಿ ಬೇರೆ, ಹಂದಿ ಬೇರೆ, ಕುರಿ ಮಾಸ ತಿಂಬಷ್ಟ್. ತಗಣೆ ಅಂಕಲ್, ತಿನ್ನಿ ಅಂಕಲ್‌ಂತ ಹೇಳಿಕಂಡ್ ಗೂಡೆಗ ಬಡ್ಸಿದೇ ಬಡ್ಸಿದ್. ನಾನಂತೂ ಲಾಯ್ಕ ಊಟ ಮಾಡ್ದೆ.

ಒಳಗೆ ಹೋದೇ ತಡ, ಸೋಮಯ್ಯನ ಅಮಲ್ ಬುಟ್ಟ್‌ಹೋತ್. ನೀಲು ಗೂಡೆ ಕಟ್ಲ ಮೇಲೆ ಕವುಂಚಿ ಮಲ್‌ಗುಟ್ಟು.

ಸೋಮಯ್ಯಂಗೆ ಹೆದ್ರಿಕೆ ಆತ್.

'ಯಾಕವ್ವಾ ಮಲಗಿಯೊಳಾ ? ಅಡಿಗೆ ಏನೂ ಮಾಡ್‌ತ್‌ಲೆಯಾ ?'

ಸೋಮಯ್ಯ ಕಟ್ಲ ಹತ್ರ ಹೋಗಿ ಕೇಳ್ತ್.

ನೀಲುನ ತಲೆಕೂದಲೆಲ್ಲಾ ಕೆದ್‌ರಿ ಹೋಗುಟ್ಟು. ಅವ್ಳು ಮರ್‍ಚ್ಕಂಡ್ ಮಲಗಿತ್ತ್.

'ನೀಲೂ, ಏ ಮಗಳೆ—'

ಸೋಮಯ್ಯ ಮಗಳ್ನ ಮುಟ್ಟಿಕರ್ತ್.

ಸದ್ದೇ ಇಲ್ಲೆ.

ಅವಳ ಮೊಕಕ್ಕೆ ಸೊಲ್ಪ ನೀರ್ ಹಾಕ ನಾಂತ ಹೇಳಿ ಅಂವ ಅಡಿಗೆ ಮನೆಗೆ ಹೋತ್. ನೀರ್‌ನ ಮಂಡೆ ಹತ್ರ ತಲಪಿ ದಂವ ಕರೆಂಟ್ ಶಾಖ್ ಹೊಡ್ದಂಗೆ ನಿತ್ತ್ ಬುಟ್ಟಿತ್. ಅವನ ಕಣ್ಣ್ ಮುಂದೆ ರಂಜನ್‌ದ್ ಹೆಣ ಬಿದ್ದಿತ್ತ್.

ಗಾಳಿಮರ ಸೋಮಯ್ಯನ ಕಾಲ್ ಮರಗಟ್ಟ್ ಹೋತ್. ಹೆದ್ರಿ ಅವನ ಕಣ್ಣ್ ಒಂದ್ ಗಳಿಗೆ ಮುಚ್ಚೀ ಹೋತ್. ತಾನ್ ರಕ್ತದ ಹೊಳೆಲಿ ನಿತ್ತಗೆ ಅವಂಗೆ ಅನ್ಸಿತ್.

ಎರಡನೇ ಸಲ ರಂಜನ್‌ದ್ ಹೆಣನ ನೋಡೋ ಶಕ್ತಿ ಅವಂಗಿತ್ತ್‌ಲೆ. ಹೆಂಗೋ ಅಡಿಗೆ ಮನೆಂದ ಕಾಲ್ ಎಳ್‌ಕಂಡ್ ಹೊರಗೆ ದಾಟಿ ಅಂವ ಮರ್‍ಡ್ಕೆ ಸುರ್ ಮಾಡ್ತ್.

ಸೋಮಯ್ಯ ಮರ್ದ್ದ್ ಕೇಳಿ ಸುತ್ತ ಇದ್ದ ಜನ ಬಂದೊ. ನೆರೆಮನೆ ಜೋಯಪ್ಪ ಮತ್ತೆ ಕುಞ್ಞಪ್ಪ ಮೊದ್ಲ ಬಂದವು.

ರಕ್ತದ ಮಧ್ಯಲಿ ಬಿದ್ದಿದ್ದ ರಂಜನ್‌ದ್ ಹೆಣ ನೋಡಿಬುಟ್ಟ್ ಅವು ಒಮ್ಮೆಗೆ ನಡ್ಗಿ ಹೋದೊ.

ಯಾರ್ ಎಂತ ಕೇಳ್ರೂ ಗಾಳಿಮರ ಸೋಮಯ್ಯಂದ್ ಒಂದೇ ಜವಾಬ್.

'ನಾನೀಗ ಬಂದದ್ ನನ್ನ ಏನೂ ಕೇಳ್ಬೇಡಿ. ನಂಗೆ ಏನೂ ಗೊತ್ತ್‌ಲೆ. ನನ್ನ ದಮ್ಮಯ್ಯ ಕೇಳ್ಬಡಿ.

'ನಿನ್ನ ಮಗಳೆಲ್ಲಿ ?'

ಜೋಯಪ್ಪ ಕೇಳ್ತ್.

'ಅವುಳಲ್ಲಿ ಸೊಯೆತಪ್ಪಿ ಬಿದ್ದುಟ್ಟು. ನೀವ್ಯಾರಾದ್ರ್ ಹೋಗಿ ನನ್ನ ಮಗ್ಳುನ ಒಮ್ಮೆ ಆಸ್ಪತ್ರೆಗೆ ಸಾಗ್ಸಿಯಪ್ಪಾ...

ಕಳ್ದ ಸಂಚಿಕೆಲಿ............

ದೇವಯ್ಯನೊಟ್ಟಿಗೆ ಗೌರನ ಕೊಂದೆ ತೇಳಿ ಸುಳ್ಳು ಹೇಳಿ ಅವಂಗೆ ಬರಕಾಗಿದ್ದ ದುಡ್ಡ್‌ನ ಕೇಳ್ದ್. ದೇವಯ್ಯಂಗೆ ಅನುಮಾನಾದ್ರೂ ನಾನೊಂದು ಸಲ ಹೆಣ ನೋಡೊಕು ತೇಳ್ದ್. ಆದರೂ ಚಂಗುಮಣಿ ತಡ ಆದ್ರೆ ನನ್ನ ಪೊಲೀಸ್‌ನವು ಹಿಡ್ದರೆ ಕಷ್ಟಾದೆ ತೇಳಿ ದೇವಯ್ಯನ ಒಪ್ಸಿ ಅವನ ಕೈಂದ 30 ಸಾವ್ರ ತಕಂಡ್ ಹೋದೆ. ಅಂವ ಅತ್ತ ಹೋದಂಗೆ ಇತ್ತಂದ ಗೌರ ದೇವಯ್ಯಂಗೆ ಮನೆಗೆ ಇಷ್ಟೊತ್ತಾದರೂ ಊಟಕ್ಕೆ ಬಾತ್ಲೆ ತೇಳಿ ಫೋನ್ ಮಾಡ್ದೆ.

ಮುಂದೆ ಓದಿ............

ಯಾರಪ್ಪಾ ಈ ಕೊಲೆ ಮಾಡ್‌ದವು? ಅಯ್ಯೊ... ಬೋರ್‌ಗುಡ್ಡೆ ದೇವಯ್ಯ ಇನ್ನ್ ನನ್ನ ಬುಟ್ಟದ್ಯಾ?'

ಸೋಮಯ್ಯ ಮರ್ಸ್ಟಕಂಡೇ ಹೇಳ್ತ್.

ಸಾಲ್ಕೈದ್ ಗೂಡೆಗ ಮನೆ ಒಳಗೆ ಹೋಗಿ ನೋಡ್‌ದೊ. ಸೋಮಯ್ಯ ಹೇಳ್ದ್ ನಿಜ. ನೀಲುಗೆ ಸೊಯಿ ಇಲ್ಲೆ. ಅವು ಅವಳ ಮೊಕಕ್ಕೆ ನೀರ್ ಚಿಮುಕಿಸಿ ಕರ್ದೊ.

ನೀಲು ಒಮ್ಮೆ ಕಣ್ಣ್ ಬುಟ್ಟ್ ಮತ್ತೆ ಮುಚ್ಚಿತ್. ಅವುಳ್‌ನ ರಂಜನ್ ಕೆಡ್ಸಿಟ್ಟ್ಯೊಂತ ಎಲ್ಲಾ ಗ್ಯಾನ ಮಾಡ್ದೊ. ಅದಕ್ಕಾಗಿ ಅವ್ಳು ರೋಶಲಿ ಅವನ ಚಾಕ್‌ಂದ ಚುಚ್ಚಿ ಕೊಂದಿರ್ಕೊಂತ ಬಂದವು ಮಾತಾಡ್ದೊ.

ರೋಡ್‌ಂದ ಸೊಲ್ಪ ದೂರಲಿ ಸೋಮಯ್ಯನ ಮನೆ. ಸುತ್ತ ಮರಗಿಡ ಇದ್ದದರ್‌ಂದ ನೆರೆಮನೆಯವುಕೆ ಬಂದ್ ನೋಡಿಕೆ ಆತ್‌ಲೆ.

ಸತ್ತದ್ ರಂಜನ್ ಆದ್ರೂ ಜನಗ ಮಾತ್ರ ನೀಲುನ ಸ್ಥಿತಿ ಕಂಡ್ ಬೇಜಾರ್ ಮಾಡ್‌ತಿದ್ದೊ. ಒಳ್ಳೆ ಗಡ್ಸ್ ಇರೊ ಗೂಡೆ. ಕೆಡ್ಸಿಕೆ ಬಂದ ಗಂಡ್ಸ್‌ಗೆ ಸೆರಿಯಾದ ಶಿಕ್ಷೆನೇ ಕೊಟ್ಟ್‌ಟ್ಟ್ಯೊಂತ ಜನ ಮಾತಾಡ್ತಿದ್ದೊ. ಯಾರ್ಯಾರೊ ಸೇರ್ಕಂಡ್ ನೀಲುವ ಆಸ್ಪತ್ರೆಗೆ ಕರ್ಕಂಡ್ ಹೋದೊ. ಜೋಯಪ್ಪನೂ ಕುಂಞಪ್ಪನೂ ಹೋಗಿ ಬುಟ್ಟ್ ಸ್ಟೇಶನ್‌ಲಿ ವಿಸ್ಯ ಹೇಳ್ದೊ.

ಬೋರ್‌ಗುಡ್ಡೆ ಜನಕೆ ಸುದ್ಧಿ ಮುಟ್ಟ ಕಾಕನ ಎಲ್ಲವು ನಡ್‌ಗಿದೊ. ಸುದ್ಧಿ ಕೇಳ್‌ದೇ ತಡ ಎಲ್ಲಾ ಸೋಮಯ್ಯನ ಮನೆಗೆ ಓಡ್‌ದೊ

ಬೋರ್‌ಗುಡ್ಡೆ ದೇವಯ್ಯನ ಮನೆಲಿ ಯಾರೆಲ್ಲೋ ಮರ್ದೊ ಸದ್ದ್ ನಾಡ್‌ಕೊಲ್ಲಿ ಮಾದಪ್ಪನ ಮನೆಗೆ ಕೇಳ್‌ತಿತ್ತ್. ಮಾದಪ್ಪನೂ ಮೊರನೂ ಓಡಿ ಬಂದೊ.

'ಐ ಸೇ ಯೂ ಗೆಟ್‌ಔಟ್.'

ಬೋರ್‌ಗುಡ್ಡೆ ದೇವಯ್ಯ ನಾಡ್‌ಕೊಲ್ಲಿ ಮಾದಪ್ಪನ ತಡ್‌ದ್ ಕೈ ತೋರಿಸ್ಕಂಡ್ ಹೇಳ್ತ್.

'ನೀನಾಗಲೀ ನಿನ್ನ ಮಗಳಾಗಲೀ ನನ್ನ ಮನೆ ಕಾಂಪೌಂಡ್ ಒಳಗೆ ಕಾಲಿಟ್ಟರೆ ಹೊಡ್ದ್ ನಿಮ್ಮ ಸೊಂಟ ಮುರ್ಸಿಬುಟ್ಟನೆ ಕಳ್ಳ ಸೂ... ಮಕ್ಕ'

'ಇಲ್ಲಿ ಎಂತ ನಡ್‌ತ್‌ಂತ ಒಮ್ಮೆ ಹೇಳಿ ಭಾವ. ಮರ್ದುವ ಸದ್ದ್ ಕೇಳ್ದಲ್ಲಾ'

ನಾಡ್‌ಕೊಲ್ಲಿ ಮಾದಪ್ಪ ಕೇಳ್ತ್.

'ಭಾವ ಗಡ ಭಾವ, ಯಾರ್ ಮಾರಾಯಾ ನಿನ್ನ ಭಾವ. ಕಳ್ಳ ಬೊಡ್ಡಿಮಂಜ ಅಲ್ಲಿ ನಿನ್ನ ಮಗಳು ಮಾತ್ರ ಅಲ್ಲ

[ 20ನೇ ಪುಟ ನೋಡಿ]

[ 16ನೇ ಪುಟದಿಂದ ]

ಸಂಸ್ಥೆ ಮುಂದೆ ಬೆಳೆಯುಕ್ಕುತ್ತಾದರೆ, ಅದ್ಕೆ ಸ್ವಯಂಪ್ರೇರಿತ, ಉದಾರ ಮನೋಭಾವದ ಸಮಾನ ಮನಸ್ಕರ ಸಹಕಾರ ಅತೀ ಮುಖ್ಯ. ಇದ್ಕೆ ಉದಾಹರಣೆಯಾದರೆ ನಮ್ಮದ್ ತದ್ವಿರುದ್ಧ!

ಈ ಲೇಖನ ಸ್ವಾರ್ಥಕ್ಕಾಗಿ ಅಥವಾ ಸಂಪಾದಕರ್ನ ಮೆಚ್ಚಿಸೊಕುತ್ತೇಳಿ ಬರ್ದದ್‌ತೇಳ್ರೆ ತಪ್ಪ್. ನನ್ನಂಗೆ ಇನ್ನೆಷ್ಟ ಜನರಿಗೆ ಉಪಕಾರ ಆಗಿರ್‌ಕಿಲೆ. ಹಂಗಿರ್ಕನ ಈ ಪತ್ರಿಕೆಗೆ ಈಗಾಗಲೇ ಚಂದದಾರರಾಗಿದ್ದ್, ನವೀಕರಿಸದಿದ್ದರೆ ಅಥವಾ ಹೊಸದಾಗಿ ಚಂದದಾರರಾಗದಿದ್ದರೆ ಪತ್ರಿಕೆ ನಡ್ಸುದ್ ಹೆಂಗೆ. ಒಂದು ವೇಳೆ ಅನಿವಾರ್ಯ ಕಾರಣಂದ ಪತ್ರಿಕೆ ನಿತ್ತ್ ಹೋದರೆ, ಎಷ್ಟ್ ಜನ ಪ್ರತಿಭಾವಂತರಿಗೆ ಅನ್ಯಾಯ ಮತ್ತೆ ಅವಕಾಶ ಇಲ್ಲದಾದುಲೇ. ಅಥವಾ ಇದ್ಕೆ ಪರ್ಯಾಯವಾಗಿ ಬೇರೊಂದು ಪತ್ರಿಕೆ ನಡ್ಸಿಕೆ ಸಾಧ್ಯ ಉಟ್ಟಾ. ಯಾಕೆತ್ತೇಳ್ರೆ ಈಗಾಗಲೇ ಎರಡ್ ಪತ್ರಿಕೆ ಕಣ್ಮರೆಯಾಗುಟ್ಟು. ಆದ್ರಂದ ಮೇಲಿನ ಎಲ್ಲಾ ನೈಜ ಅಂಶಗಳನ್ನ ಗಮನಲಿಟ್ಟ್‌ಕಂಡ್ ಜನಾಂಗದ ಏಳಿಗೆನ ಗ್ಯಾನ ಮಾಡಿಕಂಡ್, ಏಕೈಕ ಪತ್ರಿಕೆಯಾದ ಸಂಗಾತಿನ ಉಳ್ಸೋಕು, ಬೆಳ್ಸೊಕು. ಇದ್ ನಮ್ಮ ಧರ್ಮ. ಈ ದುಸ್ಸಾಹಸಕ್ಕೆ ಕೈ ಹಾಕಿದ ಸಂಪಾದಕರನ್ನ ಯಾವ ಕಾಲಕ್ಕೂ ಕೈ ಬುಡದೆ ಕಾಲಾನುಕಾಲಕ್ಕೆ ಅವ್ಕೆ ಸಲಹೆ ಸೂಚನೆಗಳನ್ನ ನೀಡಕು. ಅಲ್ಲದೆ ಪತ್ರಿಕೆನ ಜನಾಂಗದ ಮನೆ ಮನೆಗೆ ತಲುಪಿಸಿ ಪ್ರತಿಯೊಬ್ಬನೂ ಓದಿಕೆ ಮಾಡ್‌ತ್ತಿರುವ ಕಾರ್ಯಯೋಜನೆಗೆ ಮತ್ತೆ ಎಲ್ಲಾ ತರದ ಸಹಕಾರ ನೀಡಿ ಬೆಳ್ಸದು ನಮ್ಮೆಲ್ಲರ ಆದ್ಯ ಕರ್ತವ್ಯ ತೇಳ್ಕನ ಯಾರು ಮರೆಯಕ್ಕಾದ್.

ಒಂದು ಜನಾಂಗದ ಅಭಿವೃದ್ಧಿಗೆ, ಸಂಘಟನೆಗೆ, ಪತ್ರಿಕೆಯೇ ಮಾಧ್ಯಮ ತ್ತೇಳ್ದ್ ಇಲ್ಲಿ ಪ್ರಸ್ತುತ ಮತ್ತೆ ಸ್ತುತ್ಯಾರ್ಹವಾದ ಕೆಲಸಕ್ಕೆ ನಾವೆಲ್ಲವೂ ಸೇರಿ ಒಗ್ಗಟ್‌ಂದ ದೊಡ್ಡ ಸಮಾಜ ಕಟ್ಟಿ ಹಿತರಕ್ಷಣೆನ ಕಾಪಾಡಿಕಂಡ್ ಪೋಯಿ. ಒಳ್ಳೆ ಕೆಲ್ಸಕ್ಕೆ ನಮ್ಮ ಕುಲಗುರುದ್ ಆಶೀರ್ವಾದ ಉಟ್ಟು. ಈ ಕೊಡಗ್ ಸಂಗಾತಿ ಮೂಲಕ ನನ್ನ ಅನಿಸಿಕೆಗಳನ್ನ ಬರ್ದ್ ಓದುಗರೊಟ್ಟಿಗೆ ಭಾವನೆಗಳನ್ನ ಹಂಚಿಕಣಿಕೆ ಆತ್. ಇಲ್ಲದಿದ್ದರೆ...? ಆದ್ರಂದ ನಾನ್ ಸಂಗಾತಿಗೆ ಅಭಾರಿಯಾಗಿ ಮತ್ತೆ ಚಿರಋಣಿಯಾಗಿ ಎಂದೆಂದಿಗೂ ಒಳೆ.

"ಕೊಡಗು ಸಂಗಾತಿ ಗೌಡ ಸಂಗಾತಿಯಾಗಲಿತ್ತೇಳಿ ಹಾರೈಸಿನೆ"

ಗುಡ್ಡೆಮನೆ ರಮೇಶ್, ಉಪಾಧ್ಯಕ್ಷರು
ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ, ಮಡಿಕೇರಿ.

# ಕಾಮುಣಿ ಗೂಡೆದ್ ಕಂಬಳಿ ಹರ್ದ್ಪೋತ್ ಗಡ !

ಕಾಮುಣಿ ಗೂಡೆ ಕಾಲ್‌ಲೂ, ಕೈಲೂ ಉಗುರು ಬುಡಿಕೆ ಶುರ್‌ಮಾಡ್ತ್. ಯಾಗ ಅವ್ವು ಉಗುರು ಬುಡಿಕೆ ಶುರು ಮಾಡ್ತ್. ಕೆಲ್ಸ ಹಞ ಕಮ್ಮಿ ಮಾಡ್ತ್ ಕಾಫಿ ಪಾತ್ರ ಬೆಳ್ಗವ್ವಾಂತ ಅವ್ವ ಹೇಳ್ರಿ ಕಾಮುಣಿನ ಮುಸುಂಡು ಆ ಪಾತ್ರಕ್ಕಿಂತ ದೊಡ್ಡದಾಗಿ ಊದಿಕಂಬಕೆ ಶುರಾತ್. ಹಟ್ಟೆಬಾಚ್‌ಕನ ಹಂದಿಗೂಡ್‌ಕಡೆ, ಕೋಳಿಗೂಡ್ ಕಡೆ ಹೋದರಂತೂ ಸಂಕಟ ಪಟ್ಕಂಡ್ ಕೆಲ್ಸ ಮಾಡ್ತಿತ್. ಒಂದೊಂದ್ ಕೆಲ್ಸ ಮಾಡ್ದ್ವ, ಎಷ್ಟೋ ಹೊತ್ತ್‌ಮುಟ್ಟ ಉಗುರುಂದ ಜಿಡ್ಡ್ ತೆಗ್ಯದು. ಮೆಣ್ಸ ಕಡೆಕನಂತೂ ಇಡಿಕಡಿ ಇಡಿಕಡಿ ಕಡೇಕೆ ಶುರ್ ಮಾಡ್ತ್. ನುಣ್ಣಂಗೆ ಕಡಿನೆ, ಕೂಡಿಕಂಡ್ ಕಡಿಂತ ಅವ್ವ ಹೇಳ್ರಿ ಇವ್ವು ಗೊಣಗೊಣಾಂತ ಹೇಳಿಕಂಡ್ ಕಡೇತಿತ್. ಎಲ್ಲಿ ಉಗುರು ಸವ್ದದೆಯೋಂತ ಇವ್ವು ಎಚ್ಚರ ಮಾಡಿಕಂಬದು. ಇವ್ವು ಯಾಕೆ ಹಂಗೆ ಮಾಡ್ದೋಂತ ಅವ್ವಂಗೆ ಗೊತ್ಲೆ.

ಒಂದಿನ ಇವ್ವು ಮೀನ್ ಹೊರ್ದ್ದ ಮಡ್ಗಿತ್. ಆ ಸನಿ ಹಿಡ್ದ ಕೊತ್ತಿ ಒಂದ್ ತುಂಡ್‌ನ ಕಚ್ಚಿಕಂಡ್ ಓಡ್ತ್. ಕಾಮುಣಿ ಆ ಕೊತ್ತಿನ ಓಡ್ಸಿಕಂಡ್ ಹೋತ್. ಹಂಗೆ ಓಡ್‌ಕನ ಕಾಲ್ ತೊಡ್ಕಿ [ಕಾಲಿಗೆ ಕಾಲ್ ತಾಂಗಿ] ಬೀತ್. ಬಲಕಾಲ್ ಉಗುರು

ಬಿ. ಆರ್. ಜೋಯಪ್ಪ, ಮದೆ.

ಎಡಕಾಲಿಗೆ ತಾಂಗಿ ಗಾಯಾತ್. ಗಾಯ ಸಣ್ಣದಾಗಿದ್ದರೂ ಉರಿ ಜಾಸ್ತಿ ಆತ್. ರಕ್ತ ಸೋರ್ತ್. ಈ ಗಾಯ ಒಂದೆರ್‌ಡ್ ದಿನಾಕನ ಜೋರ್ ಜೋರೇ ಆತ್. ಗಾಯಕ್ಕ ಅದಾಕಿತ್, ಇದಾಕಿತ್. ಯಾವ್ದಾಕಿರೂ ಗಾಯ ಗುಣ ಆತ್ಲೆ. ಅವ್ವು ಹೊದೇತಿದ್ದ ಬೆಡ್‌ಶೀಟ್, ಕಂಬ್ಳಿಯೆಲ್ಲಾ ಕಾಲ್‌ಉಗುರು ತಾಂಗಿ ತಾಂಗಿ ಇಷ್ಟ ಇಷ್ಟೇ ಹರೆಕೆ ಶುರಾತ್. ಹಿಂಗೆಲ್ಲಾದ್ರೂ ಉಗುರುನ ಮಾತ್ರ ತೆಗೆಕೆ ಮನ್ಸಾತ್ಲೆ.

ಅದೆಲ್ಲ ಇರ್‍ಲಿ. ಇನ್ನ ಗಾಯುದ ಕಥೆ ಕೇಳಿ : ಬೆಳಿ ಕೆಲ್ಸ ಬೇರೆ. ಕೂಳೆ ಗುತ್ತಿ ತಾಂಗಿಯೆಲ್ಲಾ ಆಕನ ಗಾಯ ಪೂರ ರೇಸಿ ಕಟ್ಟಿಕಂಡ್ ಕಾಮುಣಿಗೆ ಕುದ್ದರೂ ಒಂಥರ, ನಿತ್ತರೂ ಒಂಥರ, ಏನೋ ಒಂದ್ ರೀತಿ ಕಸಿವಿಸಿ ಆತ್. ಇನ್ನ್ ಹಿಂಗೇ ಇದ್ದರೆ ಆಕಿಲೇಂತ ಗ್ಯಾನ ಮಾಡ್ದ ಕಾಮುಣಿ ಸೀದ ಆಸ್ಪತ್ರೆಗೆ ಹೋತು. ಅಲ್ಲಿ ಡಾಕ್ಟ್ರ ‘ಗಾಯ ಹೇಗಾಯ್ತು ? ಎಷ್ಟ ದಿನಾಯ್ತುಂತೆಲ್ಲಾ’ ಪ್ರಶ್ನೆ ಮಾಡ್ತ್. ಸೌದೆಕೊಳ್ಳಿ ತಗುಲಿದ್ದು ಸಾರ್. ನಾಕೈದು ದಿನ ಆಯ್ತು ಸಾರ್‌ಂತ ಇವ್ವು ಹೇಳಕನ ‘ಏ ! ಈ ಗಾಯಾಗಿ ತಿಂಗ್ಳೇ ಕಳ್ದಂಗಿದೆ. ನಿನ್ನ ಕಾಲಿನ ಉಗುರು ತಗಲಿದ್ದಲ್ವಾ ?’ ಹಿಂಗೆ ಡಾಕ್ಟ್ರ ಕೇಳ್‌ಕನ ಕಾಮುಣಿಗೆ ಎಲ್ಲಾ ಬಂದಂಗಾಗಿ ಈ ಡಾಕ್ಟ್ರಿಗೆ ಯಾರೋ ಚುಚ್ಚಿಕೊಟ್ಟೋಳೊ ಕಂಡದೆ. ಇಲ್ಲರೆ ಅದೆಂಗೆ ಗೊತ್ತಾತ್ತಕೆ ಸಾಧ್ಯ? ಇನ್ನ್ ಸುಳ್ಳು ಹೇಳಿರೆ ಆಕಿಲೆಂತ ಗ್ಯಾನ ಮಾಡ್ದ ಕಾಮುಣಿ ನಡ್ದ ಕಥೆನ ವಿವರಾಗಿ ಹೇಳ್ತ್. ಆಗ ಡಾಕ್ಟ್ರ ಹೇಳ್ತ್ : ‘ಉಗುರು ಮತ್ತು ಹಲ್ಲಿನಿಂದಾದ ಗಾಯ ವಿಷದಷ್ಟ ಅಪಾಯುದ್ದು. ನೀನು ಇವತ್ತೇ ಈ ಕೈ ಉಗುರು, ಕಾಲಿನ ಉಗುರು ಕತ್ತರಿಸು. ಇಂಜೆಕ್ಷನ್ ಬರ್‍ದಿದ್ದೇನೆ. ಈ ಮಾತ್ರೆನ ಮೂರೊತ್ತು ತಕ್ಕೋ ಮೂರು ದಿನ ಬಿಟ್ಟು ಬಾಂತ’ ಹೇಳ್ತ್.

ಮದ್ದೆಲ್ಲಾ ತಕಂಡ ಕಾಮುಣಿಗೂಡೆ ಮನೆಗೆ ಬಂದ್ ಕಣ್ಣೀರ್ ಹಾಕಂಡ್ ಉಗುರುನ ತೆಗ್ತ್. ಮೂರ್ ದಿನ ಬುಟ್ಟ್ ಪುನಾ ಆಸ್ಪತ್ರೆಗೆ ಹೋತು. ಗಾಯ ಹಞ ಬಾಡಿಕಂಡ್ ಬಾತ್. ಪೂರ ಗುಣಾತ್ಲೆ. ಪುನಾ ಹೋತು. ಹಿಂಗೇ ನಾಕೈದ್ ದಪ ಆಸ್ಪತ್ರೆಗೂ ಮನೆಗೂ ಗಾಳಿ ಬೀಸಿ ಆಕನ ಗಾಯ ಗುಣಾತ್.

ಸಾಕಪ್ಪಾ ಈ ಉಗುರು ಸಾಸ. ಇನ್ನ್ ಮುಂದೆ ನಾ ಉಗುರು ಬುಡಿಕಿಲೆಂತ ಅಂದೇ ತೀರ್ಮಾನ ಮಾಡ್ತ್. ಅಂದ್‌ನ ಆ ಕಾಮುಣಿ ಗೂಡೆ ಇಂದ್ ಮೂರ್ ಮಕ್ಕಳ ಆಯ್ಯ. ಈಗ ತನ್ನ ಮಕ್ಕಳ ಬೆನ್ನಿಗೆ ಗುದ್ದಿ ಉಗುರು ತೆಗ್ಸಿ ಮಕ್ಕಳ ಪೊರ್ಲಾಗಿ ನೋಡಿಕಣ್‌ತಾ ಉಟ್ಟು. ಯಾರಾರ್ ಉಗುರು ಬುಟ್ಟವ್ ಮಣಿ ಕಾಮುರೆ ಮುಂದೆ ದಾಟರೆ ಅವರ್ನ ನಿಲ್ಸಿಕಂಡ್ ನಾಕ್ ಬುದ್ಧಿಮಾತ್ ಹೇಳಿ ಕಳ್ಸದೆ.

ನಿಮ್ಮ ಮಕ್ಕಳ ಕೈಕಾಲ್ ಒಮ್ಮೆ ನೋಡಿ !! ಉಗುರು ಉಟ್ವಾ ? ಬಲಕೈಲೂ ಬುಟ್ಟೋಳನಾ ? ಬಳೆ ಉಟ್ವಾ ? ಹಿಂಗೆಲ್ಲಾ ಕಾಮುಣಿ ಕೇಳುವ ಪ್ರಶ್ನೆಗೆ ಸರಿಯಾದ ಉತ್ತರ ಕೊಡಿ. ಸುಮ್ಮಂಗಾರ್ ಅವ್ಳಂದ ಬಯ್ಸಿಕಂಬಡಿ.

## ಒಡಸು ಗಾದೆ

1. ಭೂಮಿ ಒಳಗೆ ಬಿಳಿ ಮನುಷ್ಯ—ಮೂಲಂಗಿ.
2. ನಿಮ್ಮ ಅಜ್ಜನ ಮೈಲೆಲ್ಲಾ ಮುಳ್ಳು—ಹಲಸ್‌ನಕಾಯಿ.
3. ಒಂಟಿ ಕಾಲ್ ಹೊಳೆಗೆ ನೂರಾರ್ ಮೊಟ್ಟೆ ಮರಲಿ —ಅಡಿಕೆ.

—ಬಾರಿಕೆರ ಜಯಂತಿ ಪಾಪಣ್ಣ, ಮರಂದೋಡ.

[ 18 ನೇ ಪುಟದಿಂದ ]

ನನ್ನ ಹೆಣ್ಣೂ ಮುರ್ಡ್ಡಿತಾ ಉಟ್ಟ್ಟ ನಿಂಗೆ ಎಂತ ನಷ್ಟ ಹೇಳ್ ?'

'ನನ್ನ ಮಗಳ್‌ನ ಮೊದ್ವೆ ಮಾಡಿ ಕಳ್ಸಿದ ಮನೆಯುವರೊಟ್ಟಿಗೆ ನಂಗೆ ಸಂಬಂಧ ಇಲ್ಲೆಂತ ಹೇಳ್ರೆ ಹೆಂಗೆ ಭಾವ ? ಇಲ್ಲಿ ಎಂತಾತ್ ಹೇಳಿ ಒವ್ಮೆ.'

'ಹೌದ್ ಮಾರಾಯ ನಿನ್ನ ಸಾನ್ ನನ್ನ ಮಜನ ಮಾವನ ಲೆಕ್ಕಲೇ ಇಟ್ಟಿತ್ಲೆ.'

'ಆದ್ರೂ ಪರ್‍ವಾಗಿಲ್ಲೆ ಮಾವ, ಒಂದ್ ನೆರೆಮನೆಯವುತ ತಿಳ್ಕಣಿ. ಇಲ್ಲಿ ಎಂತಾತ್ ಹೇಳಿ ?' ಮಾರಾ ಹೇಳ್ತ್.

'ಹೌದಾ ? ಹಂಗಾದ್ರೆ ಕೇಳಿ...ನನ್ನ ಮಜ ರಂಜನ್ ಸತ್ತ್ರತ್. ಅಲ್ಲ ಕೊಲೆ ಆತ್. ಗಾಳಿಮುರ ಸೋಮಯ್ಯನ ಮನೆಲಿ ಅವನ ಸಾವು ಉಟ್ಟ್. ನೀವೆಲ್ಲಾ ಅಲ್ಲಿಗೆ ಹೋಗಿ. ಇಲ್ಲಿ ನಿಮ್ಮ ಮೊಸಳೆ ಕಣ್ಣೀರೆಲ್ಲಾ ತೋರ್‍ಸದು ಬೇಡ. ನನ್ನ ಮಜನ ಸಾವ್ ತಗಂಡ್ ಹೋಕಾಕನ ಸ ನೀವು ನನ್ನ ಕೌಂಪೌಡ್ ಒಳಗೆ ಕಾಲಿಡಿಕೆ ಬೊತ್ತ್ !

ದೇವಯ್ಯ ಕಡ್ಡಿ ಮುರ್ದಂಗೆ ಹೇಳ್ತ್.

'ಮರ್ಯಾದೆಲಿ ದಾಟಿ ಇಲ್ಲಂದ'

ಬೋರ್‌ಗುಡ್ಡೆ ದೇವಯ್ಯ ಸಿಟ್ಟ್‌ಲಿ ಹತ್ರ ಇದ್ದ ಕುರ್ಚಿಗೆ ಒಂದ್ ಒತ್ತ್ ಕೊಟ್ಟಿತ್. ಆ ಕುರ್ಚಿ ದಡ ಬಡಾಂತ ಹೋಗಿ ಬೀತ್.

'ಬಾ ಪಪ್ಪಾ ನಾವು ಪೋಯಿ. ಮಾರ ಅಪ್ಪನ ಕರ್ಸ್ತ್. [ಸಶೇಷ]

## ನುಡಿಮುತ್ತು

ಕೆಲಸ ಮಾಡದೆ ಬದುಕಲು ಅವಕಾಶ ಕಲ್ಪಿಸುವ, ಅಧಿಕಾರಕ್ಕಾಗಿ ನಡೆಯುವ ಹೋರಾಟ ಹಾಗೂ ಪರದಾಟವು ಅಂತಿಮ ವಾಗಿ ನಮ್ಮ ಸಂಸ್ಥೆಗಳ ಶಕ್ತಿಯನ್ನು ಪರೀಕ್ಷಿಸುತ್ತವೆ.

—ಅಬ್ರಹಾಂ ಲಿಂಕನ್.

## ನಗೆ ಹನಿಗ

ಶಾಲೆ ಟೀಚರ್ ರಾಜು ಕೇಳ್ತ್

ರಾಜು ನಿನ್ನ ಮದರ್ ಟಾಂಗ್ ಯಾವ್ದು.

ರಾಜು-ಅನುಮಾನನೇ ಬ್ಯಾಡ ಟೀಚರ್ ನನ್ನ ಮದರ್‌ಟಂಗ್ ಎಲ್ಲರಂಗೆ ಚರ್ಮ ದ್ದೇತ ಹೇಳ್ತ್.

* * *

ಮುತ್ತು ಒಂದಿನ ಅಂಗಡಿಗೆ ಹೋತ್.

ಅಂಗಡಿಯಂವ : ಎಂಥ ಬೇಕು ಸಾರ್

ಮುತ್ತು : ಬಾರ್ ಸೋಪು ಕೊಡಿ

ಅಂಗಡಿಯಂವ : ಯಾವುದು [501] ಬಾರ್ ಕೊಡ್ಲಾ

ಮುತ್ತು : ಅಯ್ಯೋ...ಬ್ಯಾಡ ಅಷ್ಟೊಂದು ಯಾಕೆ 1 ಬಾರ್ ಸೋಪು ಕೊಡಿ ಸಾರ್.

* * *

ಅಮ್ಮ ಏನಾರ್ ಒಂದು ಕೆಲ್ಸ ಹುಡ್ಕಿ ಕಪ್ಪಾ ನಿನ್ನ ಕಾಲ್ ಮ್ಯಾಲೆ ನೀನ್ ನಿತ್ತ್‌ಕಂಡ್ರೆ ನಿನ್ನ ಹೊಟ್ಟೆನಾದ್ರು ತುಂಬಿಸಿಕಣಕ್ಕಲ್ಲಾ.

ರಾಮು : ಸರಿ ಅಮ್ಮ ಬಟ್ಲ್‌ಲಿ ಹಾಕಿದ ಇಡ್ಲಿ ನಂಗೆ ತಾನೆ ಕೊಡ್ ನಿತ್ತ್ ಕಂಡ್ ತಿಂದೆ ಬುಟ್ನೆ ನನ್ನ ಕಾಲ್‌ಲಿ ನಿಂತಂಗೆ ಆತ್, ನನ್ನ ಹೊಟ್ಟೆ ತುಂಬಿ ದ್ದಂಗೂ ಆತಲ್ಲಾ.

—ಚೆಟ್ಟನೆರವನ ಪೊ. ಆಶಾ
ವಿರಾಜಪೇಟೆ.

## ಬ್ಯಾಜರ ಸಂಗ್ತಿ

ಮೂಲತಃ ಭಾಗಮಂಡಲದ ಈಗ ಮೂಡಬಿದ್ರೆಲಿ ವಾಸವಿರುವ ಶ್ರೀ ಕುದುಕುಳಿ ಜೈಪ್ಪನವು ತಮ್ಮ 55ನೇ ವಯಸ್‌ಲಿ ಅಂದ್ರೆ 1999ನೇ ಇಸ್ವಿ ಜನವರಿ 30 ರಂದ್ ವೈಕುಂಠವಾಸಿಯಾದೊತೇಳಿ ತಿಳ್ದಿಬಂದುಟು.

## ಹುತ್ತರಿ ಹಬ್ಬ ಆಚರಣೆ

ದಿನಾಂಕ 4–12–98 ರಂದು ಕುಶಾಲ ನಗರದಲ್ಲಿ ವಾಸವಿರುವ ಗೌಡ ಬಾಂಧವರು ಒಟ್ಟಾಗಿ ಸೇರಿ ಕೊಡಗನ ರಮೇಶ್‌ರವರ ನೇತೃತ್ವದಲ್ಲಿ ಒಡ್ಡೋಲಗ ಸಮೇತವಾಗಿ ಮೆರವಣಿಗೆಯಲ್ಲಿ ಗೌಡ ಸಮಾಜದಿಂದ ಹೊರಟು ಶ್ರೀ ಕೊಡಗನ ರಮೇಶ್‌ರವರ ಗದ್ದೆಯಿಂದ ರಾತ್ರಿ 9 ಗಂಟೆಗೆ ಕದಿರು ಕುಯ್ದು ವಿಜೃಂಭಣೆಯಿಂದ ಹುತ್ರಿ ಆಚ ರಿಸಿದರು. ಇದರಲ್ಲಿ ಸುಮಾರು 350 ಸ್ಟ ಬಾಂಧವರು ಪಾಲ್ಗೊಂಡಿದ್ದರು.

—ಕುಂಭಗೌಡನ ಸೋಮಣ್ಣ,
ಕುಶಾಲನಗರ.

## ಟ್ರೈಟ್

ಅಪ್ಪಣೆ ಅಜ್ಜಂಗೆ ಅರವತ್ತ್ ಆತ್
ಅಂಗಡಿ ಮುಟ್ಟ ನಡಿಯಕೆ ಬೊತ್ತು
ಕೈಲ್ ಮೂರ್ತ ಹಬ್ಬಲಿ ಹಾಕಿತ್ ಕುಪ್ಪಿ
ಪಾಲದಾಟ್‌ಕನ ನೀರಿಗೆ ಬಿತ್ತ್ ಟೊಪ್ಪಿ
ಅಜ್ಜ ಹೇಳ್ತ್ ನಿಂಗೆ ಬ್ಯಾಡ ನೋಡು ಹೈದ
ಅಜ್ಜನು ಬಾತ್‌ಲೆ ಹೈದನು ಬಾತ್‌ಲೆ
ಮನೆಲಿ ಅಜ್ಜಿನ ಗೋಳು ನೋಡಿಕೆ ಆದುಲೆ

—ಹೊಸೂರು ಆರ್. ನಿರಂಜನ್,
ಕೊಡಗು.

## ಅಳಿಯನ ಆಸ್ತಿ

ಹೊಳೆಕೆರೆ ಭೂಮಿ
ಬರೆಕರೆ ಮನೆ
ಕೊರಟ್ ನೇಗ್‌ಲ್
ಬಡಕಲ್ ಎತ್ತ್
ಯಾರಿಗೆ ಕಮ್ಮಿ ನಮ್ಮಳಿಯ ?
ಇಂವ ನಮ್ಮ ಮನೆ ತೊಳಿಯ!

—ಶ್ರೀ ಕುಲ್ಲಚನ ಕಾರ್ಯಪ್ಪ,
ಕುಂಬಳದಾಳು.

ಗೌಡ ಜನಾಂಗದ ಏಕೈಕ ಅರೆಭಾಷಿಕ ಪತ್ರಿಕೆಯಾಗಿ ಮೂರನೆ ವರ್ಷಕ್ಕೆ ಕಾಲಿಟ್ಟಿರುವ
**"ಕೊಡಗು ಸಂಗಾತಿ"** ನವ್ಮೊಂದಿಗೆ ಇದ್ದು ಪ್ರಜ್ವಲಿಸಲೆಂದು ಹಾರೈಸುವ

## ಶ್ರೀ ಕಡ್ಲೇರ ಆನಂದ ದೇವಯ್ಯ

ಪೊಲೀಸ್ ವೈರ್‌ಲೆಸ್ ವಿಭಾಗ, ಬೆಂಗಳೂರು

## ಶ್ರೀಮತಿ ಪೊನ್ನಮ್ಮ ಆನಂದ

ಸ್ಟಾಫ್ ನರ್ಸ್, ಜಯದೇವ ಹೃದ್ರೋಗ ಆಸ್ಪತ್ರೆ, ಬೆಂಗಳೂರು

**ಮಗ ಅವಿನಾಶ್ ಮತ್ತು ಮಗಳು ಅಶ್ವಿನಿ**

ಮನೆ ವಿಳಾಸ : ನಂ. **23**, ಎರಡನೇ ಮಹಡಿ ಒಂದನೇ ಬ್ಲಾಕ್, ನರ್ಸಸ್ ಕ್ವಾರ್ಟರ್ಸ್
**1ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018**

ದೂರವಾಣಿ : **080-6708476**

---

## ಕೃ ತ ಜ್ಞ ತೆ ಗ ಳು

ದಿನಾಂಕ **31-1-99** ರಂದು ದೈವಾಧೀನರಾದ **ಕಡ್ಯದ ದಿ|| ಅಯ್ಯಣ್ಣನವರ ಧರ್ಮಪತ್ನಿ ಚಿಣ್ಣಮ್ಮನವರ** ನಿಧನದ ಸಂದರ್ಭದಲ್ಲಿ ಭೇಟಿ ನೀಡಿ ನಮ್ಮ ದುಃಖದಲ್ಲಿ ಪಾಲ್ಗೊಂಡು ಸಾಂತ್ವನ ನೀಡಿದ ಹಾಗೂ ಅಂತ್ಯಕ್ರಿಯೆ ಕಾರ್ಯದಲ್ಲಿ ಸಹಕರಿಸಿದ ಮತ್ತು ದೂರವಾಣಿ ಮೂಲಕ ತಮ್ಮ ಸಂತಾಪ ವ್ಯಕ್ತಪಡಿಸಿದ ನಮ್ಮ ಎಲ್ಲಾ ಬಂಧು-ಮಿತ್ರರಿಗೂ ಹಿತೈಷಿಗಳಿಗೂ ಈ ಮೂಲಕ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ಅಲ್ಲದೆ ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಸಹ ಪ್ರಾರ್ಥಿಸುವ.



ಚಿಣ್ಣಮ್ಮನವರು

ದುಃಖತಪ್ತರು :

**ಕಡ್ಯದ ಅಯ್ಯಣ್ಣ ರಾಘವಯ್ಯ, ಗೌರಮ್ಮ**
**ಚಂದ್ರಹಾಸ, ತೀರ್ಥರ್ಮ, ತಿಲಾಕ್ಷ,**
**ಶಶಿಧರ, ಮಂಜುನಾಥ**
**ಮತ್ತು ಮನೆಯವರು**

**ಮುಕ್ಕಾಟ ದೇವಯ್ಯ, ದಯಕುಮಾರಿ**

ದೂರವಾಣಿ : **08272-35897**

K R N N-240 10-01-96 TCI Kar. 09592

ಪ್ರಕಟಣೆ

ಬ್ಲೂ ಬರ್ಡ್ಸ್ ಸಾಕರ್ ಕ್ಲಬ್, ಮಡಿಕೇರಿ, ಕೊಡಗು

ಇದರ ಆಶ್ರಯದಲ್ಲಿ

ಹುತಾತ್ಮ ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ

# ಜಿಲ್ಲಾ ಮಟ್ಟದ ಮುಕ್ತ ಕಾಲ್ಚೆಂಡು ಪಂದ್ಯಾವಳಿ

1999ನೇ ಇಸವಿ ಫೆಬ್ರವರಿ ತಿಂಗಳು ದಿನಾಂಕ 27 ಮತ್ತು 28 ರಂದು ಮಡಿಕೇರಿಯ ಸರಕಾರಿ ಪದವಿ ಪೂರ್ವ ವಿದ್ಯಾಲಯದ ಮೈದಾನದಲ್ಲಿ ಪಂದ್ಯಾಟ ನಡೆಯಲಿದ್ದು, ಭಾಗವಹಿಸಲಿಚ್ಛಿಸುವ ತಂಡಗಳು ತಮ್ಮ ಪ್ರವೇಶವನ್ನು ಈ ಕೆಳಗಿನ ವಿಳಾಸಕ್ಕೆ ದಿನಾಂಕ 16-2-99ರೊಳಗಾಗಿ ಕಳುಹಿಸಿಕೊಡಲು ಕೋರಿದೆ.

**ಪ್ರಥಮ ಬಹುಮಾನ**

ಟ್ರೋಫಿ, ರೂ. **5000**/- ನಗದು ಮತ್ತು ವೈಯಕ್ತಿಕ ಟ್ರೋಫಿಗಳು

**ದ್ವಿತೀಯ ಬಹುಮಾನ**

ಟ್ರೋಫಿ, ರೂ. **3000**/- ನಗದು ಮತ್ತು ವೈಯಕ್ತಿಕ ಟ್ರೋಫಿಗಳು

ನಿಬಂಧನೆಗಳು :

1. ಪ್ರವೇಶ ಶುಲ್ಕ ರೂ. **250**/-
2. ಪ್ರತೀ ತಂಡದಲ್ಲಿ ಗರಿಷ್ಠ 7 ಸದಸ್ಯರಿರತಕ್ಕದ್ದು

ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ

ಪ್ರವೇಶ ಕಳುಹಿಸುವ ವಿಳಾಸ :

ಬ್ಲೂ ಬರ್ಡ್ಸ್ ಸಾಕರ್ ಕ್ಲಬ್

ಬಿನ್ : ಮೆಸರ್ಸ್ ವೆಸ್ಟರ್ನ್ ವುಡ್ ವರ್ಕ್ಸ್

ಸಿ-18, ಇಂಡಸ್ಟ್ರೀಯಲ್ ಎಸ್ಟೇಟ್, ಮಡಿಕೇರಿ. ಅಂಚೆ : 571 201 ಕೊಡಗು.

ದೂರವಾಣಿ : 29050

---

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

ದೂರವಾಣಿ ಸಂಖ್ಯೆ : 29394 / 24344 / 24555

Printed by M.K. Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore - 12. Published at Mysore, Editor PATTADA P. SHEELAMANI, No: 35, 1st Cross, 4th Block ( Near Divisional Telephone Office), Jayalakshmipuram, Mysore - 570 012 © 516771